# ಶ್ರೀ ಆನಂದ ಆಂಜನೇಯ

(ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ದಿವ್ಯ ಕಥೆಗಳು)



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ




ಶ್ರೀರಾಮರಾಮ ರಾಮೇತಿ ರಮೇರಾಮೇ ಮನೋರಮೇ |

ಸಹಸ್ರನಾಮ ತತ್ತುಲ್ಯಮ್ ರಾಮನಾಮ ವರಾನನೇ ||

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಆನಂದ ಆಂಜನೇಯ

**(ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ದಿವ್ಯ ಕಥೆಗಳು)**



**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಆನಂದ ಆಂಜನೇಯ

(ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ದಿವ್ಯ ಕಥೆಗಳು)

ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ

© ಸರ್ವಹಕ್ಕುಗಳು ರಚಯಿತನದು

ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು

**www.lordofsevenhills.com**

**T.V.R.K. MURTHY,** M.Tech

Flat No.903, F-Block, Vertex Sadguru Krupa Apartments

Beside Sanghamitra School, Nizampet Road,

HYDERABAD – 500 085, India

Cell : + 91 9849443752

Email : viswapathi@yahoo.com, shridesigns@gmail.com

# ಮುನ್ನುಡಿ

**ಯತ್ರ ಯತ್ರ ರಘುನಾಥ ಕೀರ್ತನಂ**

**ತತ್ರ ತತ್ರ ಕೃತಮಸ್ತಕಾಂಜಲಿಂ**

**ಭಾಷ್ಪವಾರಿ ಪರಿಪೂರ್ಣ ಲೋಚನಂ**

**ಮಾರುತೀಮ್ ನಮತ ರಾಕ್ಷಸಾಂತಕಂ**

ಶ್ರೀ ಆಂಜನೇಯ ಸ್ವಾಮಿಯು ಭಕ್ತಸುಲಭನು. ಅವನನ್ನು ನಿತ್ಯ ಸ್ಮರಿಸುವವರಿಗೆ ಬುದ್ಧಿ, ಬಲ, ಯಶಸ್ಸು, ತೇಜಸ್ಸು ಮತ್ತು ಧೈರ್ಯ ಲಭಿಸುತ್ತದೆ. ಯಾವುದೇ ರೀತಿಯ ಅನಾರೋಗ್ಯವಾದರೂ ಕೂಡಲೇ ನಿವಾರಣೆಯಾಗುತ್ತದೆ ಮತ್ತು ಸರ್ವ ಸೌಭಾಗ್ಯಗಳು ದೊರಕುತ್ತದೆ.

ಶ್ರೀ ವೆಂಕಟೇಶ್ವರ ಸ್ವಾಮಿಯ ದಯೆಯಿಂದ ನಾನು ಇಲ್ಲಿಯವರೆಗೆ ಆ ಸ್ವಾಮಿಯ ಲೀಲೆಗಳ ಮೇಲೆ ಹದಿನೇಳು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಆ ಸ್ವಾಮಿಯ ದಯೆಯಿಂದ ಇವೆಲ್ಲಾ ಭಕ್ತರನ್ನು ಎಷ್ಟೋ ಸಂತೋಷಪಡಿಸುತ್ತಿವೆ. ಇದರಲ್ಲಿ ಮುಖ್ಯವಾಗಿ ಶ್ರೀ ವೆಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ ಬಹಳ ಪ್ರಚಾರ ಹೊಂದಿ ದೇಶ ವಿದೇಶಗಳಲ್ಲಿಯ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿ ನಿತ್ಯ ಆಚರಿಸಲ್ಪಡುತ್ತಿದೆ. ನನ್ನ ಆಪ್ತರು ಕೆಲವುಮಂದಿ ತುಂಬಾ ಸಮಯದಿಂದ ನನ್ನನ್ನು ಶ್ರೀ ಆಂಜನೇಯ ಸ್ವಾಮಿಯ ಲೀಲೆಗಳ ಮೇಲೆ ಪುಸ್ತಕವನ್ನು ರಚಿಸಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆ ಸ್ವಾಮಿಯ ಅನುಗ್ರಹವಾದಾಗ ತಪ್ಪದೇ ಬರೆಯುತ್ತೇನೆಂದು ಹೇಳಿದೆನು. ಇಷ್ಟು ದಿನಗಳ ನಂತರ ಆ ಪವನಪುತ್ರನ ಅನುಗ್ರಹ ಸಿಕ್ಕಿತು. ಒಂದುದಿನ ಬೆಳಗ್ಗಿನ ಜಾವ ಆ ಸ್ವಾಮಿಯು ಅದ್ಭುತ ರೂಪದಿಂದ ಪ್ರಕಾಶಿಸುತ್ತಾ ಬಹಳ ಆನಂದಸ್ವರೂಪನಾಗಿ ಸ್ವಪ್ನದಲ್ಲಿ ದರ್ಶನ ಕೊಟ್ಟನು. ಆ ದಿನವೇ, ಈ ಶ್ರೀ ಆನಂದ ಆಂಜನೇಯ - ನನ್ನ ಮನಸ್ಸಿನಲ್ಲಿ ರೂಪುಹೊಂದಿತು. ಈ ಪುಸ್ತಕದಲ್ಲಿಯ ಪ್ರತಿ ಒಂದು ಅಕ್ಷರವೂ ಆ ಸ್ವಾಮಿಯು ಅನುಗ್ರಹದಿಂದಲ್ಲದೇ ಬೇರೇನಲ್ಲ. ಇದರಲ್ಲಿ ನನ್ನ ದೊಡ್ಡಸ್ತಿಕೆ ಏನೂ ಇಲ್ಲ. ಎಲ್ಲಾ ಆ ಸ್ವಾಮಿಯ ಅನುಗ್ರಹವೇ! ಶ್ರೀಮನ್ನಾರಾಯಣನ ಅವತಾರವಾದ ಶ್ರೀ ರಾಮಚಂದ್ರುನ ಪ್ರಿಯಭಕ್ತನೇ ಆಂಜನೇಯನು. ಆ ಸ್ವಾಮಿಯು ಚಿರಂಜೀವಿಯಾಗಿ ಈಗಲೂ ತನ್ನ ಭಕ್ತರು ತನ್ನನ್ನು ಅಥವಾ ಆ ಶ್ರೀ ರಾಮಚಂದ್ರುನನ್ನು ಎಲ್ಲಿ ಸ್ತುತಿಸುತ್ತಿರುತ್ತಾರೋ ಅಲ್ಲಿ ತಪ್ಪದೇ ಇರುತ್ತಾನೆ.

ಆ ಸ್ವಾಮಿಯ ಅನುಗ್ರಹದಿಂದ ನಾನು ಈ ಪುಸ್ತಕವನ್ನು ರಚಿಸುವುದು ಸಾಧ್ಯವಾಯಿತು. ಇದೆಲ್ಲಾ ಆ ಸ್ವಾಮಿಯ ಅನುಗ್ರಹವಲ್ಲದೇ ಬೇರೇನೂ ಅಲ್ಲ. ಈ ಪುಸ್ತಕವನ್ನು ಓದಿದವರಿಗೆ ಸರ್ವಸೌಭಾಗ್ಯಗಳು ಸಿಗುತ್ತದೆ. ಯಾವ ರೀತಿಯ ಅನಾರೋಗ್ಯವೂ ಹತ್ತಿರಬಾರದು. ಯಾರು ಆ ಹನುಮಂತನನ್ನು ಮನಸ್ಸಲ್ಲಿ ಸ್ಮರಿಸುತ್ತಾ, ಈ ಪುಸ್ತಕವನ್ನು ಓದುತ್ತಾರೋ ಅವರಿಗೆ ಎಲ್ಲದರಲ್ಲೂ ಜಯ ಸಿಗುತ್ತದೆ.

ಈ ಪುಸ್ತಕ ರಚನೆಗೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಹಕರಿಸಿದ ಪ್ರತಿಯೊಬ್ಬರಿಗೂ, ಈ ಪುಸ್ತಕವನ್ನು ಓದಿದ ನಿಮಗೂ, ಹೇಳಿದ/ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ, ಸಕಲ ಆಯುರಾರೋಗ್ಯ ಸೌಭಾಗ್ಯಗಳು ಸಿಗಲೀ ಎಂದು ಆ ಶ್ರೀ ಹನುಮಂತನನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||

|| ಶ್ರೀ ಹನುಮತ್ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

ದಿನಾಂಕ: 2013

*************

# ಈ ಪುಸ್ತಕವನ್ನು ಹೇಗೆ ಓದಬೇಕು?

ಹನುಮಂತನು ಭಕ್ತಸುಲಭನು. ಆ ಸ್ವಾಮಿಯನ್ನು ನಿತ್ಯ ನೆನೆಯುವವರಿಗೆ ಯಾವರೀತಿಯ ಆಪತ್ತುಗಳು ಬರುವುದಿಲ್ಲ. ಕೈಹಿಡಿದ ಕೆಲಸಕಾರ್ಯಗಳೆಲ್ಲವೂ ಜಯಹೊಂದುತ್ತದೆ. ಪ್ರತಿದಿನ ರಾತ್ರಿ ಮಲಗುವ ಮೊದಲು ಆ ಸ್ವಾಮಿಯನ್ನು ನೆನೆದರೆ ಮನಸ್ಸು ಪ್ರಶಾಂತವಾಗಿದ್ದು ಒಳ್ಳೆಯ ನಿದ್ರೆ ಬರುತ್ತದೆ. ಯಾವುದೇ ರೀತಿಯ ಕೆಟ್ಟ ಕನಸ್ಸು ಬರುವುದಿಲ್ಲ. ಮರುದಿನ ನಾವೆಲ್ಲಾ ಬಹಳ ಉತ್ಸಾಹದಿಂದ ಇರುತ್ತೇವೆ. ಆ ಸ್ವಾಮಿಯ ಅನುಗ್ರಹವನ್ನು ಹೊಂದಲು ಈ ಪುಸ್ತಕವನ್ನು ಪಠಿಸುವುದು ಬಹಳ ಸುಲಭವಾದ ಮಾರ್ಗ. ಈ ಪುಸ್ತವನ್ನು ಓದುವಾಗ ಉಪವಾಸ ಇರಬೇಕಾದ ಅವಸರವಿಲ್ಲ. ಶುಚಿಯಾಗಿ ಸ್ನಾನಮಾಡಿ, ಪ್ರಶಾಂತ ಮನಸ್ಸಿನಿಂದ ಇದ್ದರೆ ಸಾಕು.

- ಈ ಪುಸ್ತಕವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಈ ಪುಸ್ತಕವನ್ನು ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ, ಮಖ, ಪೂರ್ವಭಾದ್ರ, ಸ್ವಾತಿ ನಕ್ಷತ್ರಗಳಲ್ಲಾಗಲೀ ಪಠಣ ಮಾಡಿದರೆ ಅತ್ಯಂತ ಶುಭಪ್ರದ. ಮನೆಯಲ್ಲಿ ಪೂಜಾಮಂದಿರದಲ್ಲಿ ಬೆಳಿಗ್ಗಿನ ಸಮಯದಲ್ಲಿ ಕುಳಿತುಕೊಂಡು ಓದಬಹುದು. ಈ ಪುಸ್ತಕವನ್ನು ಓದಿದ ಕೂಡಲೇ ಎರಡು ಬಾಳೆಹಣ್ಣನ್ನು ಸ್ವಾಮಿಯವರಿಗೆ ನಿವೇದಿಸಿದರೆ ತುಂಬಾ ಒಳ್ಳೆಯದು. ಅನುಕೂಲವಿದ್ದವರು ತೆಂಗಿನಕಾಯಿಯನ್ನು ಕೂಡ ಒಡೆಯಬಹುದು.

- ಆರ್ಥಿಕ, ಅನಾರೋಗ್ಯ ಸಮಸ್ಯೆಗಳಿಂದ ಬಾಧೆಪಡುತ್ತಿರುವವರು ಈ ಪುಸ್ತಕವನ್ನು ಕ್ರಮವಾಗಿ ಮೂರು ದಿನ ಸ್ವಾಮಿಯ ದೇವಸ್ಥಾನದಲ್ಲಾಗಲೀ, ಅಥವಾ ಇತರ ದೇವತೆಗಳ ದೇವಸ್ಥಾನದಲ್ಲಾಗಲೀ ಬೆಳಗ್ಗಿನ ಸಮಯದಲ್ಲಾಗಲೀ, ಸಾಯಂಕಾಲದ ಸಮಯದಲ್ಲಾಗಲೀ ಕುಳಿತುಕೊಂಡು ಓದಿದರೆ ಆ ಸಮಸ್ಯೆಗಳೆಲ್ಲಾ ಕೂಡಲೇ ಹೋಗಿಬಿಡುತ್ತದೆ.

- ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳು ಯಾವುದೇ ಶನಿವಾರದ ದಿನ ಸ್ವಾಮಿಯ ದೇವಸ್ಥಾನದಲ್ಲಿ ಕುಳಿತುಕೊಂಡು ಈ ಪುಸ್ತವನ್ನು ಪಠಿಸಿದರೆ, ಆ ಸ್ವಾಮಿಯ ಅನುಗ್ರಹದಿಂದ ಪರೀಕ್ಷೆಗಳನ್ನು ವಿಜಯವಂತವಾಗಿ ಬರೆಯುತ್ತಾರೆ.

- ಸಂತಾನಭಾಗ್ಯ ಇಲ್ಲದವರು ಯಾವ ಶನಿವಾರದ ದಿನವಾದರೂ ಈ ಪುಸ್ತಕವನ್ನು ಸ್ವಾಮಿಯ ದೇವಸ್ಥಾನದಲ್ಲಾಗಲೀ ಅಥವಾ ಇತರ ದೇವರುಗಳ ದೇವಸ್ಥಾನದಲ್ಲಾಗಲೀ ಕುಳಿತುಕೊಂಡು ಕ್ರಮವಾಗಿ ಮೂರು ದಿನ ಓದಿದರೆ ಖಂಡಿತವಾಗಿ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ವಿವಾಹವಾಗದ ಯುವಕ-ಯುವತಿಯರು ಈ ವಿಧವಾಗಿ ಓದಿದರೆ ಬೇಗನೇ ವಿವಾಹವು ನಿಶ್ಚಯವಾಗುತ್ತದೆ.

- ಮಾನಸಿಕ ಸಮಸ್ಯೆಗಳಿಂದ ಬಾಧೆಪಡುತ್ತಿರುವವರು ಯಾವ ಶನಿವಾರದ ದಿನವಾದರೂ ಈ ಪುಸ್ತಕವನ್ನು ಮನೆಯಲ್ಲಾಗಲೀ, ಸ್ವಾಮಿಯ ದೇವಸ್ಥಾನದಲ್ಲಾಗಲೀ ಓದಿದರೆ ಅವರಿಗೆ ಒಳ್ಳೆಯ ಆರೋಗ್ಯ ಲಭಿಸುತ್ತದೆ. ಅನಾರೋಗ್ಯದಿಂದ ಬಾಧೆಪಡುತ್ತಿರುವವರಿಗೆ ಅವರ

ಬಂಧುಗಳಾಗಲೀ, ಸ್ನೇಹಿತರಾಗಲೀ ಈ ಪುಸ್ತಕವನ್ನು ಓದಿ ಕೇಳಿಸಿದರೆ, ಅವರ ಅನಾರೋಗ್ಯವು ತ್ವರಿತದಲ್ಲೇ ಬಿಟ್ಟುಹೋಗಿ ಸಂಪೂರ್ಣ ಆರೋಗ್ಯವಂತರಾಗುತ್ತಾರೆ.

- ಶ್ರೀ ಹನುಮಂತದೇವರ ದೇವಸ್ಥಾನದಲ್ಲಿ ಈ ಪುಸ್ತಕವನ್ನು ಅಲ್ಲಿ ಸೇರಿದ ಭಕ್ತರಿಗೆ ಓದಿ ಕೇಳಿಸಿದವರಿಗೆ ಆ ಸ್ವಾಮಿಯ ಅನುಗ್ರಹವು ಲಭಿಸಿ ಎಲ್ಲಾ ಕಾಲದಲ್ಲೂ ಸುಖಸಂತೋಷದಿಂದ ಜೀವಿಸುತ್ತಾರೆ. ಸಮಯಸಿಕ್ಕಾಗ ಬೆಳಿಗ್ಗೆ ಅಥವಾ ಸಾಯಂಕಾಲ ಓದಬಹುದು. ಓದುವುದು ಪೂರ್ತಿಯಾದ ನಂತರ ಸ್ವಾಮಿಯವರಿಗೆ ಬಾಳೆಹಣ್ಣನ್ನು ನಿವೇದಿಸಿ ಭಕ್ತರೆಲ್ಲರೂ ಭಕ್ತಿಯಿಂದ ಪ್ರಸಾದವಾಗಿ ಸ್ವೀಕರಿಸಿದರೆ ತುಂಬಾ ಒಳ್ಳೆಯದು.

- ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತವಾಗಿ ಕೂಡ ನೀವು ಓದಬಹುದು. ಅವರಿಗೆ ಸಂತಾನ, ವಿವಾಹ, ಉದ್ಯೋಗಕ್ಕಾಗಿ ನೀವು ಈ ಪುಸ್ತಕವನ್ನು ಶ್ರೀ ಹನುಮಂತ ದೇವರ ದೇವಸ್ಥಾನದಲ್ಲಿ ಕುಳಿತುಕೊಂಡು ಕ್ರಮವಾಗಿ ಮೂರು ದಿನ ಓದಿದರೆ ಕೂಡಲೇ ಫಲ ಸಿಗುತ್ತದೆ.

- ಶ್ರೀ ಹನುಮಂತದೇವರ ಸನ್ನಿಧಿಯಲ್ಲಿ ಈ ಪುಸ್ತಕವನ್ನು ಭಕ್ತರಿಗೆ ಓದಿ ಕೇಳಿಸಿದವರಿಗೆ ಕೋಟಿಜನ್ಮದ ಪುಣ್ಯಫಲ ಲಭಿಸುತ್ತದೆ. ದೇವಸ್ಥಾನದ ಅರ್ಚಕರು ಪ್ರತಿ ಶನಿವಾರದ ದಿನ ಸ್ವಾಮಿಯ ಎದುರಲ್ಲಿ ಈ ಪುಸ್ತಕವನ್ನು ಪಠಿಸಿದರೆ ಅವರಿಗೆ ಮತ್ತು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಸ್ವಾಮಿಯ ಅನುಗ್ರಹವು ಸಿಕ್ಕಿ ಜೀವನವು ಶುಭಪ್ರದವಾಗಿ ನಡೆಯುತ್ತದೆ.

- ವಿವಾಹವಾಗಲೀ, ಗೃಹಪ್ರವೇಶವಾಗಲೀ, ಹೊಸವ್ಯಾಪಾರವಾಗಲೀ, ಹೀಗೆ ಯಾವ ಶುಭಕಾರ್ಯಗಳು ಬರುವಾಗ ಮನೆಯಲ್ಲಿ ಒಬ್ಬಂಟಿಯಾಗಿಯಾಗಲೀ, ಬಂಧು-ಮಿತ್ರರನ್ನು ಕರೆದಾಗಲೀ ಈ ಪುಸ್ತಕವನ್ನು ಪಠಿಸಿದರೆ, ಸ್ವಾಮಿಗೆ ಪ್ರಸಾದವನ್ನು ನಿವೇದಿಸಿ, ಸ್ವೀಕರಿಸಿದರೆ ಕೈಹಿಡಿದ ಆ ಕಾರ್ಯವೂ ಶುಭಪ್ರದವಾಗಿ ಜರುಗುತ್ತದೆ. ಆನಂತರ ಮತ್ತೆ ಇನ್ನೊಮ್ಮೆ ಬಂಧು-ಮಿತ್ರರೆಲ್ಲರನ್ನು ಕರೆದು, ಈ ಪುಸ್ತಕವನ್ನು ಪಠಿಸಿ ಸ್ವಾಮಿಗೆ ಪ್ರಸಾದವನ್ನು ನಿವೇದಿಸಿ ಎಲ್ಲರೂ ಸ್ವೀಕರಿಸಿದರೆ ತುಂಬಾ ಒಳ್ಳೆಯದು.

ಆ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನವಾದರೂ ಈ ಪುಸ್ತಕವನ್ನು ಪಠಿಸಿ ಶ್ರೀ ಹನುಮಂತರ ಅನುಗ್ರಹವನ್ನು ಪಡೆಯಬಹುದು.

*************

# ಶ್ರೀ ಆಂಜನೇಯ ಅಷ್ಟೋತ್ತರ ಶತನಾಮಾವಳಿ

ಓಂ ಆಂಜನೇಯಾಯ ನಮಃ |
ಓಂ ಮಹಾವೀರಾಯ ನಮಃ |
ಓಂ ಹನುಮತೇ ನಮಃ |
ಓಂ ಮಾರುತಾತ್ಮಜಾಯ ನಮಃ |
ಓಂ ತತ್ತ್ವಜ್ಞಾನಪ್ರದಾಯ ನಮಃ |
ಓಂ ಸೀತಾದೇವೀಮುದ್ರಾಪ್ರದಾಯಕಾಯ ನಮಃ |
ಓಂ ಅಶೋಕವನಿಕಾಚ್ಛೇತ್ರೇ ನಮಃ |
ಓಂ ಸರ್ವಮಾಯಾವಿಭಂಜನಾಯ ನಮಃ |
ಓಂ ಸರ್ವಬಂಧವಿಮೋಚ್ಕೇ ನಮಃ |
ಓಂ ರಕ್ಷೋವಿಧ್ವಂಸಕಾರಕಾಯ ನಮಃ | (10)
ಓಂ ಪರವಿದ್ಯಾಪರೀಹಾರಾಯ ನಮಃ |
ಓಂ ಪರಶೌರ್ಯವಿನಾಶನಾಯ ನಮಃ |
ಓಂ ಪರಮಂತ್ರನಿರಾಕರ್ತ್ರೇ ನಮಃ |
ಓಂ ಪರಯಂತ್ರಪ್ರಭೇದಕಾಯ ನಮಃ |
ಓಂ ಸರ್ವಗ್ರಹವಿನಾಶಿನೇ ನಮಃ |
ಓಂ ಭೀಮಸೇನಸಹಾಯಕೃತೇ ನಮಃ |
ಓಂ ಸರ್ವದುಃಖಹರಾಯ ನಮಃ |
ಓಂ ಸರ್ವಲೋಕಚಾರಿಣೇ ನಮಃ |
ಓಂ ಮನೋಜವಾಯ ನಮಃ |
ಓಂ ಪಾರಿಜಾತದ್ರುಮೂಲಸ್ಥಾಯ ನಮಃ | (20)
ಓಂ ಸರ್ವಮಂತ್ರಸ್ವರೂಪಿಣೇ ನಮಃ |
ಓಂ ಸರ್ವತಂತ್ರಸ್ವರೂಪೇ ನಮಃ |
ಓಂ ಸರ್ವಯಂತ್ರಾತ್ಮಕಾಯ ನಮಃ |
ಓಂ ಕಪೀಶ್ವರಾಯ ನಮಃ |
ಓಂ ಮಹಾಕಾಯಾಯ ನಮಃ |
ಓಂ ಸರ್ವರೋಗಹರಾಯ ನಮಃ |
ಓಂ ಪ್ರಭವೇ ನಮಃ |
ಓಂ ಬಲಸಿದ್ಧಿಕರಾಯ ನಮಃ |
ಓಂ ಸರ್ವವಿದ್ಯಾಸಂಪತ್ಪ್ರದಾಯಕಾಯ ನಮಃ |
ಓಂ ಕಪಿಸೇನಾನಾಯಕಾಯ ನಮಃ | (30)
ಓಂ ಭವಿಷ್ಯಚ್ಚತುರಾನನಾಯ ನಮಃ |
ಓಂ ಕುಮಾರ ಬ್ರಹ್ಮಚಾರಿಣೇ ನಮಃ |
ಓಂ ರತ್ನಕುಂಡಲದೀಪ್ತಿಮತೇ ನಮಃ |
ಓಂ ಸಂಚಲದ್ವಾಲಸನ್ನದ್ಧಲಂಬಮಾನಶಿಖೋಜ್ವಲಾಯ ನಮಃ |
ಓಂ ಗಂಧರ್ವವಿದ್ಯಾತತ್ತ್ವಜ್ಞಾಯ ನಮಃ |
ಓಂ ಮಹಾಬಲಪರಾಕ್ರಮಾಯ ನಮಃ |

ಓಂ ಕಾರಾಗೃಹವಿಮುಕ್ತ್ರೇ ನಮಃ |
ಓಂ ಶೃಂಖಲಾಬಂಧಮೋಚಕಾಯ ನಮಃ |
ಓಂ ಸಾಗರೋತ್ತಾರಕಾಯ ನಮಃ |
ಓಂ ಪ್ರಾಜ್ಞಾಯ ನಮಃ | (40)
ಓಂ ರಾಮದೂತಾಯ ನಮಃ |
ಓಂ ಪ್ರತಾಪವತೇ ನಮಃ |
ಓಂ ವಾನರಾಯ ನಮಃ |
ಓಂ ಕೇಸರಿಸುತಾಯ ನಮಃ |
ಓಂ ಸೀತಾಶೋಕನಿವಾರಕಾಯ ನಮಃ |
ಓಂ ಅಂಜನಾಗರ್ಭಸಂಭೂತಾಯ ನಮಃ |
ಓಂ ಬಾಲಾರ್ಕಸದೃಶಾನನಾಯ ನಮಃ |
ಓಂ ವಿಭೀಷಣಪ್ರಿಯಕರಾಯ ನಮಃ |
ಓಂ ದಶಗ್ರೀವಕುಲಾಂತಕಾಯ ನಮಃ |
ಓಂ ಲಕ್ಷ್ಮಣಪ್ರಾಣದಾತ್ರೇ ನಮಃ | (50)
ಓಂ ವಜ್ರಕಾಯಾಯ ನಮಃ |
ಓಂ ಮಹಾದ್ಯುತಯೇ ನಮಃ |
ಓಂ ಚಿರಂಜೀವಿನೇ ನಮಃ |
ಓಂ ರಾಮಭಕ್ತಾಯ ನಮಃ |
ಓಂ ದೈತ್ಯಕಾರ್ಯವಿಘಾತಕಾಯ ನಮಃ |
ಓಂ ಅಕ್ಷಹಂತ್ರೇ ನಮಃ |
ಓಂ ಕಾಲನಾಭಾಯ ನಮಃ |
ಓಂ ಪಂಚವಕ್ತ್ರಾಯ ನಮಃ |
ಓಂ ಮಹಾತಪಸೇ ನಮಃ |
ಓಂ ಲಂಕಿಣೀಭಂಜನಾಯ ನಮಃ | (60)
ಓಂ ಶ್ರೀಮತೇ ನಮಃ |
ಓಂ ಸಿಂಹಿಕಾಪ್ರಾಣಭಂಜನಾಯ ನಮಃ |
ಓಂ ಗಂಧಮಾದನಶೈಲಸ್ಥಾಯ ನಮಃ |
ಓಂ ಲಂಕಾಪುರವಿದಾಹಕಾಯ ನಮಃ |
ಓಂ ಸುಗ್ರೀವಸಚಿವಾಯ ನಮಃ |
ಓಂ ಧೀರಾಯ ನಮಃ |
ಓಂ ಶೂರಾಯ ನಮಃ |
ಓಂ ದೈತ್ಯಕುಲಾಂತಕಾಯ ನಮಃ |
ಓಂ ಸುರಾರ್ಚಿತಾಯ ನಮಃ |
ಓಂ ಮಹಾತೇಜಸೇ ನಮಃ | (70)
ಓಂ ರಾಮಚೂಡಾಮಣಿಪ್ರದಾಯ ನಮಃ |
ಓಂ ಕಾಮರೂಪಾಯ ನಮಃ |
ಓಂ ಪಿಂಗಳಾಕ್ಷಾಯ ನಮಃ |
ಓಂ ವಾರ್ಧಿಮೈನಾಕಪೂಜಿತಾಯ ನಮಃ |

ಓಂ ಕಬಳೀಕೃತಮಾರ್ಥಾಂಡ ಮಂಡಲಾಯ ನಮಃ |
ಓಂ ವಿಜಿತೇಂದ್ರಿಯಾಯ ನಮಃ |
ಓಂ ರಾಮಸುಗ್ರೀವಸಂಧಾತ್ರೇ ನಮಃ |
ಓಂ ಮಹಿರಾವಣಮರ್ದನಾಯ ನಮಃ |
ಓಂ ಸ್ಫಟಿಕಾಭಾಯ ನಮಃ |
ಓಂ ವಾಗಧೀಶಾಯ ನಮಃ | (80)
ಓಂ ನವವ್ಯಾಕೃತಿಪಂಡಿತಾಯ ನಮಃ |
ಓಂ ಚತುರ್ಬಾಹವೇ ನಮಃ |
ಓಂ ದೀನಬಂಧವೇ ನಮಃ |
ಓಂ ಮಹಾತ್ಮನೇ ನಮಃ |
ಓಂ ಭಕ್ತವತ್ಸಲಾಯ ನಮಃ |
ಓಂ ಸಂಜೀವನಗಾಹರ್ತೇ ನಮಃ |
ಓಂ ಶುಚಯೇ ನಮಃ |
ಓಂ ವಾಗ್ಮಿನೇ ನಮಃ |
ಓಂ ದೃಢವ್ರತಾಯ ನಮಃ |
ಓಂ ಕಾಲನೇಮಿಪ್ರಮಥನಾಯ ನಮಃ | (90)
ಓಂ ಹರಿಮರ್ಕಟಮರ್ಕಟಾಯ ನಮಃ |
ಓಂ ದಾಂತಾಯ ನಮಃ |
ಓಂ ಶಾಂತಾಯ ನಮಃ |
ಓಂ ಪ್ರಸನ್ನಾತ್ಮನೇ ನಮಃ |
ಓಂ ಶತಕಂಠಮದಾಪಹೃತೇ ನಮಃ |
ಓಂ ಯೋಗಿನೇ ನಮಃ |
ಓಂ ರಾಮಕಥಾಲೋಲಾಯ ನಮಃ |
ಓಂ ಸೀತಾನ್ವೇಷಣಪಂಡಿತಾಯ ನಮಃ |
ಓಂ ವಜ್ರದಂಷ್ಟ್ರಾಯ ನಮಃ |
ಓಂ ವಜ್ರನಖಾಯ ನಮಃ | (100)
ಓಂ ರುದ್ರವೀರ್ಯಸಮುದ್ಭವಾಯ ನಮಃ |
ಓಂ ಇಂದ್ರಜಿತ್ಪ್ರಹಿತಾಮೋಘಬ್ರಹ್ಮಾಸ್ತ್ರನಿವಾರಕಾಯ ನಮಃ |
ಓಂ ಪಾರ್ಥಧ್ವಜಾಗ್ರಸಂವಾಸಿನೇ ನಮಃ |
ಓಂ ಶರಪಂಜರಭೇದಕಾಯ ನಮಃ |
ಓಂ ದಶಬಾಹವೇ ನಮಃ |
ಓಂ ಲೋಕಪೂಜ್ಯಾಯ ನಮಃ |
ಓಂ ಜಾಂಬವತಿಪ್ರೀತಿವರ್ಧನಾಯ ನಮಃ |
ಓಂ ಸೀತಾಸಮೇತ ಶ್ರೀರಾಮಪಾದ ಸೇವಾಧುರಂಧರಾಯ ನಮಃ | (108)

ಆಂಜನೇಯ ಆಂಜನೇಯ ಆಂಜನೇಯ ಪಾಹಿಮಾಂ
ಹನುಮಂತ ಹನುಮಂತ ಹನುಮಂತ ರಕ್ಷಮಾಂ

*************

# ಶ್ರೀ ಆಂಜನೇಯ ದ್ವಾದಶ ನಾಮಾವಳಿ:

ಹನುಮಾನಂಜನಾಸೂನುಃ ವಾಯುಪುತ್ರೋ ಮಹಾಬಲಃ |
ರಾಮೇಷ್ಟಃ ಫಲ್ಗುಣಸಖಃ ಪಿಂಗಾಕ್ಷೋऽಮಿತವಿಕ್ರಮಃ || 1 ||
ಉದಧಿಕ್ರಮಣಶ್ಚೈವ ಸೀತಾಶೋಕವಿನಾಶಕಃ |
ಲಕ್ಷ್ಮಣ ಪ್ರಾಣದಾತಾಚ ದಶಗ್ರೀವಸ್ಯ ದರ್ಪಹಾ || 2 ||
ದ್ವಾದಶೈತಾನಿ ನಾಮಾನಿ ಕಪೀಂದ್ರಸ್ಯ ಮಹಾತ್ಮನಃ |
ಸ್ವಾಪಕಾಲೇ ಪಠೇನ್ನಿತ್ಯಂ ಯಾತ್ರಾಕಾಲೇ ವಿಶೇಷತಃ |
ತಸ್ಯಮೃತ್ಯು ಭಯಂನಾಸ್ತಿ ಸರ್ವತ್ರ ವಿಜಯೀ ಭವೇತ್ || 3 ||

*********

# ಶ್ರೀ ಆನಂದ ಆಂಜನೇಯ

## ಪ್ರಥಮ ಅಧ್ಯಾಯ

## **ರಾಮ ಶರ್ಮನ ಕಥೆ**

ಶ್ರೀ ಹನುಮಂತ ದೇವರು ಭಕ್ತಸುಲಭನು. ತನ್ನನ್ನು ನಂಬಿ ಕರೆದವರನ್ನು ನಿತ್ಯ ನೆರಳಿನ ಹಾಗೆ ಕಾಪಾಡುವ ಅಮೃತಮೂರ್ತಿ. ಆ ಸ್ವಾಮಿಯನ್ನು ನೆನೆದರೆ ಮನಸ್ಸಿನಲ್ಲಿ ಯಾವುದೇ ಭಯವಿದ್ದರೂ ಕೂಡಲೇ ತೊಲಗುತ್ತದೆ. ಮನಸ್ಸು ಅನೇಕ ರೀತಿಯ ಸಮಸ್ಯೆಗಳಲ್ಲಿ ತಳಮಳಿಸುತ್ತಿರುವಾಗ ಶ್ರೀ ಹನುಮಂತ ದೇವರನ್ನು ಒಂದುಬಾರಿ ಮನಸ್ಸಿನಲ್ಲಿ ಸ್ಮರಿಸಿದರೆ ಸಾಕು, ಕೂಡಲೇ ಮನಸ್ಸೆಲ್ಲಾ ಬಹಳ ಹಗುರವಾಗುತ್ತದೆ. ಮಹಾಬಲವಂತನು, ಅಹಂಕಾರ ರಹಿತನು, ಅನುರಾಗಶೀಲನು ಆದ ಆಂಜನೇಯನನ್ನು ನಿರಂತರ ಮನಸ್ಸಿನಲ್ಲಿ ತುಂಬಿಕೊಂಡಿರುವವರಿಗೆ, ಅವರು ಕೈಹಿಡಿದ ಎಲ್ಲಾ ಕಾರ್ಯಗಳಲ್ಲೂ ಜಯವು ಸಿದ್ಧಿಸುತ್ತದೆ.

ಪೂರ್ವಕಾಲದಲ್ಲಿ ವೇಂಕಟಾಪುರಂ ಎಂಬ ಗ್ರಾಮದಲ್ಲಿ ರಾಮ ಶರ್ಮನೆಂಬ ಕಡುಬಡವ ಬ್ರಾಹ್ಮಣನು ವಾಸಿಸುತ್ತಿದ್ದನು. ಸ್ವತಃ ಶ್ರೀರಾಮ ಭಕ್ತನಾದ ರಾಮ ಶರ್ಮನು ನಿತ್ಯ ಆ ಶ್ರೀ ರಾಮಚಂದ್ರುನನ್ನು ಸ್ಮರಿಸುತ್ತಾ ಆ ದೇವರಿಗೆ ಅತ್ಯಂತ ಪ್ರೀತಿಪಾತ್ರನಾದ ಹನುಮಂತನನ್ನು ಕೂಡಾ ನಿತ್ಯ ಪೂಜಿಸುತ್ತಿದ್ದನು. ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಫಲವಾಗಿ ತುಂಬಾ ಬಡತನವನ್ನು ಅನುಭವಿಸುತ್ತಿದ್ದರೂ ಒಳ್ಳೆಯ ಗುಣನಡತೆಯನ್ನು ಹೊಂದಿ, ತನ್ನೊಟ್ಟಿಗಿರುವವರೆಲ್ಲರಲ್ಲೂ ಭಗವಂತನನ್ನೇ ಕಾಣುತ್ತಿದ್ದನು. ಊರಲ್ಲಿರುವ ಮನೆಗಳಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ಪೌರೋಹಿತ್ಯವನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದನು. ಆ ಊರಲ್ಲಿ ಅಲ್ಲದೇ ಸುತ್ತು-ಮುತ್ತಲ್ಲಿರುವ ಗ್ರಾಮಗಳಲ್ಲಿ ಕೂಡ ಚಿಕ್ಕ ಚಿಕ್ಕ ಪೌರೋಹಿತ್ಯ ಕೆಲಸಕ್ಕೆ ಹೋಗಿ ಬರುತ್ತಿದ್ದನು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ರಾಮ ಶರ್ಮನಿಗೆ ಪಕ್ಕದ ಊರಾದ ಸೀತಾರಾಮಪುರಂನ ಧನಿಕನ ಮನೆಯಲ್ಲಿ ಮರುದಿನ ಬೆಳಿಗ್ಗೆ ನಡೆಯುವ ಗೃಹಪ್ರವೇಶವನ್ನು ನಿರ್ವಹಿಸಲು ಬರಬೇಕೆಂದು ಕರೆ ಬಂತು. ಆ ಪಕ್ಕದ ಊರಿಗೆ ಹೋಗುವ ದಾರಿಯು ಕಾಡು ಮಾರ್ಗವಾಗಿದ್ದು, ರಾತ್ರಿ ಸಮಯದಲ್ಲಿ ಕ್ರೂರಮೃಗಗಳ ಕಾಟಹೆಚ್ಚಾಗಿದ್ದು, ರಾತ್ರಿಸಮಯದಲ್ಲಿ ಆ ಮಾರ್ಗವಾಗಿ ಪ್ರಯಾಣಿಸುವುದು ಉಚಿತವಲ್ಲದೆ, ಈ ದಿನ ಮಧ್ಯಾಹ್ನವೇ ಹೊರಟು ಸಾಯಾಂಕಾಲಕ್ಕೆ ಸೀತಾರಾಮಪುರವನ್ನು ಸೇರಬೇಕೆಂದು ನಿಶ್ಚಯಿಸಿದನು. ಸಾಯಂಕಾಲಕ್ಕೆ ಆ ಊರನ್ನು ಸೇರಿದರೆ, ಬೆಳಗ್ಗಿನಜಾವವೇ ಗೃಹಪ್ರವೇಶ ಕಾರ್ಯಕ್ರಮವನ್ನು ಪೂರ್ತಿಮಾಡಿ, ತಿರುಗಿ ಸಾಯಂಕಾಲದ ಸಮಯಕ್ಕೆ ಮನೆಯನ್ನು ಸೇರಬಹುದೆಂದು ಕೊಂಡನು.

ಮಧ್ಯಾಹ್ನ ಒಂದು ಗಂಟೆಗೆಲ್ಲಾ ಊಟಮಾಡಿ ಇನ್ನು ಹೊರಡಲು ಸಿದ್ಧವಾಗುತ್ತಿರುವಾಗ ವೇಂಕಟಾಪುರಂನ ಜಮೀನುದಾರನಿಂದ ರಾಮಶರ್ಮನಿಗೆ ಯಾವುದೋ ಮುಹೂರ್ತದ ವಿಷಯವಾಗಿ ಮಾತನಾಡಲು ಕರೆ ಬಂತು. ಈಗ ನಾನು ಅವರ ಮನೆಗೆ ಹೋದರೆ, ಸೀತಾರಾಮಪುರಂಗೆ ಹೋಗಲು ತಡವಾಗುತ್ತದೆ. ಹಾಗೆಂದು ಹೋಗದಿದ್ದರೆ ಜಮೀನುದಾರನಿಗೆ ಕೋಪ ಬರಬಹುದು. ಜಮೀನುದಾರನ ಕೋಪಕ್ಕೆ ತುತ್ತಾದರೆ, ಈ ಊರಲ್ಲಿ ಸಿಕ್ಕುತ್ತಿರುವ ಚಿಕ್ಕ ಚಿಕ್ಕ ಪೌರೋಹಿತ್ಯ ಕೆಲಸಗಳು ಕೂಡ ಲಭಿಸುವುದು ಗಗನ ಕುಸುಮವಾಗುತ್ತದೆ. ಹೀಗೆ ರಾಮ

ಶರ್ಮನು ಯೋಚಿಸಿ ಎಲ್ಲಾ ಆ ಶ್ರೀ ರಾಮಚಂದ್ರ ಪ್ರಭುವಿನ ಮೇಲೆ ಭಾರ ಹಾಕಿ ಜಮೀನುದಾರನನ್ನು ಭೇಟಿಯಾಗಲು ಹೊರಟನು. ಮನೆಯನ್ನು ತಲುಪಿದ ಹೊತ್ತಿಗೆ ಜಮೀನುದಾರನು ಯಾವುದೋ ತುರ್ತು ಕೆಲಸದ ಮೇಲೆ ಹೊರಹೋಗಿದ್ದಾನೆಂದು, ರಾಮ ಶರ್ಮನು ಬಂದರೆ ಅಲ್ಲೇ ಇರಬೇಕೆಂದು ಕೆಲಸದವರು ತಿಳಿಸಿದರು. ಈ ಮಾತುಗಳನ್ನು ಕೇಳಿದ ರಾಮ ಶರ್ಮನಿಗೆ ತುಂಬಾ ಗಾಬರಿಯಾಯಿತು. ನಿಜವಾಗಿ ಜಮೀನುದಾರನು ಯಾವಾಗ ಬರುತ್ತಾನೋ, ತಾನು ಸೀತಾರಾಮಪುರಂವನ್ನು ಯಾವಾಗ ಸೇರುತ್ತೇನೋ ಎಂದು ಬಾಧೆಪಟ್ಟನು.

ಸಾಯಂಕಾಲ ನಾಲ್ಕು ಗಂಟೆಗೆ ಜಮೀನುದಾರನು ಮನೆ ಸೇರಿದನು. ಬಂದ ನಂತರ ಮನೆಯೊಳಗೆ ಹೋಗಿ, ಒಂದು ಗಂಟೆಯ ನಂತರ ಹೊರಗೆ ಬಂದನು. ರಾಮ ಶರ್ಮನಿಗೆ, ತನ್ನ ಮಗಳಿಗೆ ವಿವಾಹವನ್ನು ಮಾಡಲು ಯೋಚಿಸಿದ್ದೇನೆ, ಒಂದುಸಾರಿ ಜಾತಕ ಪರಿಶೀಲನೆ ಮಾಡಬೇಕೆಂದನು. ಹುಡುಗಿಯ ಜಾತಕವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ರಾಮ ಶರ್ಮನು ಸ್ವಲ್ಪ ಸಮಯದಲ್ಲೇ ವಿವಾಹವಾಗುತ್ತದೆ ಎಂದನು. ಇದೆಲ್ಲಾ ಆಗುವಾಗ ಸಾಯಂಕಾಲ ಐದು ಗಂಟೆಯ ಸಮಯ. ರಾಮಶರ್ಮನು ಜಮೀನುದಾರನಿಂದ ಅನುಮತಿ ಪಡೆದು ಅವಸರದಿಂದ ಮನೆ ಸೇರಿದನು. ಹೆಂಡತಿಯು ರಾಮ ಶರ್ಮನೊಡನೆ  ಇನ್ನು ಕತ್ತಲೆ ಸಮಯವಾಯಿತು, ಸೀತಾರಾಮಪುರಂಗೆ ಹೇಗೆ ಹೋಗುತ್ತೀರಿ? ಎಂದಳು. ಆದರೇ ರಾಮ ಶರ್ಮನಿಗೆ ಬರುವ ಆ ನಾಲ್ಕು ಕಾಸನ್ನು ಕಳೆದುಕೊಳ್ಳಲು ಇಷ್ಟವಿಲ್ಲದೇ ತಾನು ತಪ್ಪದೇ ಹೋಗುತೇನೆ ಎಲ್ಲದಕ್ಕೂ ಆ ಶ್ರೀ ರಾಮಚಂದ್ರನೇ ಇದ್ದಾನೆಂದು ಹೆಂಡತಿಗೆ ಹೇಳಿ ಹೊರಡಿದನು. ಇನ್ನು ಮರುಮಾತಾಡದೇ ಹೆಂಡತಿಯು ರಾಮ ಶರ್ಮನಿಗೆ ಬಹಳ ಜಾಗ್ರತೆಗಳನ್ನು ಹೇಳಿ ಕಳುಹಿಸಿದಳು.

ರಾಮ ಶರ್ಮನು ಶ್ರೀ ರಾಮಚಂದ್ರನನ್ನು ನೆನೆಯುತ್ತಾ, ಭುಜದಲ್ಲಿರುವ ಚೀಲದಲ್ಲಿ ಗೃಹಪ್ರವೇಶಕ್ಕೆ ಬೇಕಾದ ಸಾಮಾನುಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಹೊರಟು ಸ್ವಲ್ಪಸಮಯದಲ್ಲೇ ಕಾಡುದಾರಿಯನ್ನು ಪ್ರವೇಶಿಸಿದನು. ಎಲ್ಲಾ ಕತ್ತಲೆ ತುಂಬಿಕೊಂಡಿದೆ. ದಾರಿ ಕೂಡಾ ಸರಿಯಾಗಿ ಕಾಣುತ್ತಿಲ್ಲ. ಎಲ್ಲೋ ಗೂಬೆ ಭಯಂಕರವಾಗಿ ಅರಚಿತು. ರಾಮ ಶರ್ಮನಿಗೆ ಸ್ವಲ್ಪ ಭಯ ಹುಟ್ಟಿತು. ಕೂಡಲೇ ಆ ಹನುಮಂತನನ್ನು ಮನಸ್ಸಿನಲ್ಲಿ ತಂದನು. ಯಾವರೀತಿಯ ಸಮಸ್ಯೆಯಲ್ಲೂ ಕಾಪಾಡುವ ಸ್ವಾಮಿ ಆಂಜನೇಯನು. ಆ ಸ್ವಾಮಿಯ ಹೆಸರನ್ನು ಗಟ್ಟಿಯಾಗಿ ಉಚ್ಚರಿಸುತ್ತಾ ನಡೆಯತೊಡಗಿದನು. ಕಣ್ಣಿಗೆ ಸ್ವಲ್ಪ ದೂರದಲ್ಲಿ ಒಂದು ನಾಗರಹಾವು ದಾರಿಗೆ ಅಡ್ಡವಾಗಿ ಹೆಡೆ ಬಿಡಿಸಿ ಬುಸು ಗುಟ್ಟುತ್ತಿದೆ. ರಾಮ ಶರ್ಮ ಇದ್ದಲ್ಲೇ ನಿಂತು ಹನುಮಂತ ದೇವರನ್ನು ಸ್ತುತಿಸುತ್ತಾ ಆ ಹಾವಿಗೆ ನಮಸ್ಕರಿಸಿದನು. ಅಷ್ಟೇ ಆ ಹಾವು ನೆಮ್ಮದಿಯಾಗಿ ಹೆಡೆಯನ್ನು ಬಗ್ಗಿಸಿ ಪಕ್ಕದಲ್ಲೇ ಇರುವ ಪೊದೆಯೊಳಗೆ ಹೋಯಿತು.

ರಾಮ ಶರ್ಮನು ತಿರುಗಿ ತನ್ನ ನಡುಗೆಯನ್ನು ಪ್ರಾರಂಭಿಸಿದನು. ಇನ್ನು ಹತ್ತುನಿಮಿಷದ ಮೇಲೆ ಕಾಡಿನ ದಾರಿಯು ಮುಗಿಯಿತು ಎನ್ನುವಾಗ, ಒಂದೇಸಾರಿ ಎಲ್ಲಿಂದಲೋ ಒಂದು ಚಿರತೆ ಗಟ್ಟಿಯಾಗಿ ಗರ್ಜಿಸುತ್ತಾ ರಾಮ ಶರ್ಮನ ಮುಂದೆ ಹಾರಿತು. ಹಠಾತ್ತಾಗಿ ಜರುಗಿದ ಈ ಪರಿಣಾಮಕ್ಕೆ ರಾಮ ಶರ್ಮನು ಹತಾಶನಾದನು. ತನ್ನನ್ನೇ ಗುರ್ ಎಂದು ನೋಡುತ್ತಾ ಯಾವ ಕ್ಷಣದಲ್ಲಾದರೂ ಮೇಲೆ ಹಾರಲು ಸಿದ್ಧವಾಗಿರುವ ಆ ಚಿರತೆಯನ್ನು ನೋಡುವಾಗ ರಾಮಶರ್ಮನ ಪ್ರಾಣ ಪ್ರಾಣವಾಗಿರಲಿಲ್ಲ. ಕೂಡಲೇ ಹನುಮಂತನನ್ನು ಹೀಗೆ ಪ್ರಾರ್ಥಿಸಿದನು. ಓ ಆಂಜನೇಯಾ! ಪವನಪುತ್ರಾ! ಶ್ರೀ ರಾಮದೂತ! ನೀನಲ್ಲದೇ ಅನ್ಯಥಾ ಶರಣಂ ನಾಸ್ತಿ!

ಲಂಕೆಯಲ್ಲಿ ಅನೇಕ ರಾಕ್ಷಸರನ್ನು ಸಂಹರಿಸಿದವನು. ಆ ಸೀತಾಮಾತೆಯ ಸುಳಿವನ್ನು ಕಂಡುಹಿಡಿದವನು. ನನ್ನನ್ನು ಈ ಆಪತ್ತಿನಿಂದ ರಕ್ಷಿಸು ತಂದೇ! ಎಂದು ಪ್ರಾರ್ಥಿಸಿದನು. ರಾಮ ಶರ್ಮನ ಕರೆಯನ್ನು ಕೇಳಿ ಭಕ್ತವತ್ಸಲನಾದ ಹನುಮಂತನು ದಯೆತೋರಿದನು. ಅಷ್ಟೇ! ಒಂದುಕ್ಷಣದಲ್ಲೇ ಪಕ್ಕದ ಮರದ ಮೇಲಿನಿಂದ ಗಟ್ಟಿಯಾಗಿ ಅರಚುತ್ತಾ ಒಂದು ವಾನರವು ಭಯಂಕರ ಶಬ್ದ ಮಾಡುತ್ತಾ ಚಿರತೆಯ ಮೇಲೆ ಹಾರಿತು. ಒಮ್ಮೆಲೇ ಜರುಗಿದ ಈ ಪರಿಣಾಮಕ್ಕೆ ಚಿರತೆಯು ಹೆದರಿ ಕೂಡಲೇ ಎಚ್ಚೆತ್ತು ಆ ವಾನರನ ಮೇಲೆ ಹಾರಿತು. ಎಷ್ಟೋ ತೇಜಸ್ಸಿನಿಂದ ಬೆಳಗುತ್ತಿರುವ ಆ ವಾನರನು ಸಾಮಾನ್ಯ ವಾನರನ ಹಾಗೆ ಇಲ್ಲ. ಅತ್ಯಂತ ಭೀಕರವಾಗಿ ಅರಚುತ್ತಾ ಚಿರತೆಯ ಬೆನ್ನಿನ ಮೇಲೆ ತನ್ನ ಬಲವಾದ ಉಗುರುಗಳಿಂದ ಪರಚತೊಡಗಿತು. ಇನ್ನು ತಡೆಯಲಾರದೇ ಚಿರತೆಯು ಆ ವಾನರನಿಂದ ತಪ್ಪಿಸಿಕೊಂಡು ಕಾಡಿನ ಒಳಗೆ ಓಡೋಡುತ್ತಾ ಹೋಯಿತು. ಇದು ಜರುಗಿದ ಕೂಡಲೇ ಆ ದಿವ್ಯ ವಾನರವು ಕೂಡಾ ಪಕ್ಕದಲ್ಲೇ ಇದ್ದ ಮರದ ಮೇಲೆ ಹಾರಿ ಒಂದು ಮಿಂಚಿನ ಬೆಳಕು ತೋರಿಸಿ ಅದೃಶ್ಯವಾಯಿತು.

ಜರುಗಿದ ಸಂಗತಿ ರಾಮ ಶರ್ಮನಿಗೆ ಅರ್ಥವಾಯಿತು. ಸ್ವಾಮಿಯು ಹೀಗೆ ಬಂದು ತನ್ನನ್ನು ರಕ್ಷಿಸಿದನೆಂದು ಗ್ರಹಿಸಿ ಹನುಮಂತ ದೇವರನ್ನು ಎಷ್ಟೋ ವಿಧಗಳಿಂದ ಸ್ತುತಿಸಿದನು. ಇನ್ನು ಧೈರ್ಯ ತಂದುಕೊಂಡು ಮುಂದಕ್ಕೆ ಸಾಗಿ ಆ ಊರನ್ನು ಸೇರಿ ಗೃಹಪ್ರವೇಶದ ಕಾರ್ಯಕ್ರಮವನ್ನು ನಿರ್ವಹಿಸಿ, ಕೂಡಲೇ ಹೊರಟು ಸಾಯಂಕಾಲಕ್ಕೆ ತನ್ನ ಮನೆಯನ್ನು ಸೇರಿದನು. ಜರುಗಿದ ಕಥೆಯೆಲ್ಲಾ ಹೆಂಡತಿಗೆ ತಿಳಿಸಿದನು. ಗಂಡ - ಹೆಂಡತಿಯರಿಬ್ಬರೂ ಹನುಮಂತ ದೇವರನ್ನು ಅನೇಕ ವಿಧಗಳಿಂದ ಸ್ತುತಿಸಿದರು.

ಶ್ರೀ ರಾಮನ ಭಕ್ತನಾದ ಆಂಜನೇಯನನ್ನು ಸ್ತುತಿಸಿದವರಿಗೆ ಸರ್ವಸೌಭಾಗ್ಯಗಳೂ ಸಿಗುತ್ತದೆ. ಯಾವುದೇ ಅನಾರೋಗ್ಯವಿದ್ದರೂ ತೊಲಗುತ್ತದೆ. ಆ ಸ್ವಾಮಿಯು ಅತ್ಯಂತ ಬಲಸಂಪನ್ನನು, ಭಕ್ತವತ್ಸಲನು. ಆ ಸ್ವಾಮಿಯ ಹೆಸರು ಒಂದುಸಾರಿ ನೆನೆದರೆ ಯಾವುದೇ ಭೂತ-ಪಿಶಾಚಗಳು ಕೂಡ ಹತ್ತಿರ ಬರುವುದಿಲ್ಲ. ಹನುಮಂತ ದೇವರನ್ನು ನಿತ್ಯ ಸ್ಮರಿಸುವವರಿಗೆ ಯಾವುದೇ ರೀತಿಯ ಆಪತ್ತುಬಾರದು. ಸರ್ವಾಭೀಷ್ಟಪ್ರದಾತನಾದ ಶ್ರೀ ಆಂಜನೇಯನನ್ನು ಪೂಜಿಸಿದವರಿಗೆ ಎಲ್ಲದರಲ್ಲೂ ಜಯ ಉಂಟಾಗುತ್ತದೆ.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥

*********

ಎರಡನೇ ಅಧ್ಯಾಯ

## ವಿಷ್ಣು ಭಟ್ಟನ ಕಥೆ

ಪೂರ್ವಕಾಲದಲ್ಲಿ ಕಾಳಿಂಗದೇಶದಲ್ಲಿ ಕೃಷ್ಣಾಪುರಂ ಎಂಬ ಚಿಕ್ಕ ಗ್ರಾಮವಿತ್ತು. ಆ ಗ್ರಾಮದಲ್ಲಿ ವಿಷ್ಣು ಭಟ್ಟನೆಂಬ ಬಡಬ್ರಾಹ್ಮಣನು ನಿವಾಸಿಸುತ್ತಿದ್ದನು. ಅವನು ತನಗಿರುವ ಅಲ್ಪವಿದ್ಯೆಯಿಂದ ಆ ಊರಲ್ಲಿ ಪೌರೋಹಿತ್ಯವನ್ನು ನಿರ್ವಹಿಸುತ್ತಿದ್ದನು. ಹುಟ್ಟಿನಿಂದ ಅಂಗವಿಕಲತೆಯುಳ್ಳ ಆ ವಿಷ್ಣು ಭಟ್ಟನಿಗೆ ಬಂದ ಹಣಕಾಸಿನಿಂದ ಮನೆಯನ್ನು ನಡೆಸಲು

ಬಹಳ ಕಷ್ಟವಾಗುತ್ತಿತ್ತು. ತನ್ನ ಬಡತನಕ್ಕೆ ಯಾವಾಗಲೂ ಬಾಧೆಪಡುತ್ತಿದ್ದನು. ಆ ಊರಲ್ಲಿ ಶ್ರೀ ಅಭಯ ಆಂಜನೇಯಸ್ವಾಮಿ ದೇವಸ್ಥಾನವಿತ್ತು. ಆ ದೇವಾಲಯವು ಬಹಳ ಪುರಾತನವಾಗಿದ್ದು ಅಲ್ಲಿಯ ಸ್ವಾಮಿಯು ಬಹಳ ಮಹಿಮೆಯಿದ್ದವನೆಂದು ಅಕ್ಕ-ಪಕ್ಕದ ಗ್ರಾಮಗಳಲ್ಲಿ ಪ್ರಸಿದ್ಧಿ ಹೊಂದಿದನು. ಪ್ರತಿವರ್ಷ ಆ ದೇವಸ್ಥಾನದಲ್ಲಿ ಬಹಳ ಉತ್ಸವಗಳು ಜರುಗುತ್ತಿತ್ತು. ಉತ್ಸವ ಸಮಯದಲ್ಲಿ ಜನರು ತಂಡೋಪತಂಡವಾಗಿ ಬರುತ್ತಿದ್ದರು. ನೆರೆಯ ಊರಿಂದ ಗಾಡಿಕಟ್ಟಿ ಮರಿಮಕ್ಕಳೊಂದಿಗೆ ಬರುತ್ತಿದ್ದರು. ಉತ್ಸವ ಜರುಗುವ ಎಲ್ಲಾ ದಿನಗಳಲ್ಲಿ ಊರೆಲ್ಲಾ ಹಬ್ಬದ ವಾತಾವರಣವನ್ನು ಪಡೆಯುತ್ತಿತ್ತು. ಶ್ರೀ ಆಂಜನೇಯಸ್ವಾಮಿಯ ದೇವಾಲಯವನ್ನು ಬೇರೆ ಬೇರೆ ಹೂವುಗಳಿಂದ ತುಂಬಾ ಅದ್ಭುತವಾಗಿ ಅಲಂಕರಿಸುತ್ತಿದ್ದರು.

ಪ್ರತಿವರುಷದ ಹಾಗೇ ಆದಿನ ಕೂಡ ಉತ್ಸವಗಳು ಬಹಳ ವಿಜೃಂಭಣೆಯಿಂದ ಜರುಗುತ್ತಿತ್ತು. ಪ್ರತಿದಿನ ಶ್ರೀ ಹನುಮಂತಸ್ವಾಮಿಗೆ ಅನೇಕ ಪ್ರತ್ಯೇಕ ಪೂಜೆಗಳನ್ನು ನಿರ್ವಹಿಸುತ್ತಿದ್ದರು. ಪ್ರತಿದಿನ ಬಹಳ ಹೆಸರುಳ್ಳ ಭಾಗವತದವರು ರಾತ್ರಿ ಹತ್ತು ಗಂಟೆಯಿಂದ ಮೊದಲ್ಗೊಂಡು ಮುಂಜಾನೆಯವರೆಗೆ ಹರಿಕಥೆಗಳನ್ನು ಹೇಳುತ್ತಿದ್ದರು. ಭಕ್ತರೆಲ್ಲರೂ ಸ್ವಾಮಿಯ ಮಹಿಮೆಗಳನ್ನು ಕೇಳುತ್ತಾ ತುಂಬಾ ಆನಂದಪಡುತ್ತಿದ್ದರು. ಆ ದಿನ ಮಂಗಳವಾರ. ಸ್ವಾಮಿಯನ್ನು ಬಹಳ ಅದ್ಭುತವಾದ ಸಿಂಧೂರದಿಂದ ಅಲಂಕರಿಸಿದ್ದರು. ಬಹಳ ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಆ ಸ್ವಾಮಿಯ ರೂಪವನ್ನು ದರ್ಶಿಸಿ ಭಕ್ತರೆಲ್ಲರೂ ತನ್ಮಯರಾಗುತ್ತಿದ್ದರು. ಹನುಮಂತಸ್ವಾಮಿಗೆ ಭಕ್ತರೆಂದರೆ ಬಹಳ ವಾತ್ಸಲ್ಯ. ಯಾವುದೇ ಕಷ್ಟದಲ್ಲಿದ್ದರೂ ಆ ಸ್ವಾಮಿಯನ್ನು ನೆನೆದರೆ, ಆ ಕಷ್ಟವೂ ಕ್ಷಣದಲ್ಲೇ ತೊಲಗುತ್ತದೆ. ಕೈಹಿಡಿದ ಯಾವುದೇ ಕಾರ್ಯವಾದರೂ ವಿಜಯವಂತವಾಗಿ ನಡೆಯಬೇಕಾದರೇ ಹನುಮಂತ ದೇವರನ್ನು ಆರಾಧಿಸಿದರೆ ಆ ಕೆಲಸವೂ ನೀಟಾಗಿ, ನಿರ್ವಿಘ್ನವಾಗಿ ಜರುಗುತ್ತದೆ. ಯಾವುದೇ ರೀತಿಯ ಅನಾರೋಗ್ಯದಿಂದ ಬಳಲುತ್ತಿರುವವರೂ ಆ ಸ್ವಾಮಿಯನ್ನು ನಿತ್ಯ ಆರಾಧಿಸಿದರೆ, ತ್ವರಿತದಲ್ಲೇ ರೋಗವಿಮುಕ್ತರಾಗುತ್ತಾರೆ.

ವಿಷ್ಣು ಭಟ್ಟ ಕೂಡಾ ದಿನಾಲು ಜರುಗುವ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾನೆ. ಈ ಸಂವತ್ಸರವಾದರೂ ತನ್ನ ಕಷ್ಟಗಳು ತೊಲಗಿದರೆ ಒಳ್ಳೆಯದು ಎಂದು ಆ ಸ್ವಾಮಿಯನ್ನು ಪ್ರಾರ್ಥಿಸಿದನು. ಹುಟ್ಟಿನಿಂದ ಇದ್ದ ಅಂಗವಿಕಲತೆಯೊಟ್ಟಿಗೆ ವಿಷ್ಣು ಭಟ್ಟನಿಗೆ ಈ ಮಧ್ಯೇ ಒಂದು ಚರ್ಮವ್ಯಾದಿ ಕೂಡ ಹಿಡಿದು ಬಹಳ ಔಷಧಿಗಳನ್ನು ಮಾಡಿದರೂ ಗುಣ ಕಾಣುತ್ತಿಲ್ಲ. ಮನೆ ನಡೆಸುವುದು ಕಷ್ಟವಾಗಿದೆ. ಅನೇಕ ವಿಧದ ಗಿಡಮೂಲಿಕೆಗಳ ಮದ್ದುಮಾಡಿದರೂ ಯಾವುದೇ ಉಪಶಮನ ಕಾಣುತ್ತಿಲ್ಲ. ವಿಷ್ಣು ಭಟ್ಟನು ಇದೆಲ್ಲಾ ತನ್ನ ಪೂರ್ವಜನ್ಮದ ಕರ್ಮಫಲವೆಂದು ಭಾವಿಸಿದನು.

ಒಂದುದಿನ ಸಾಯಂಕಾಲ ದೇವಸ್ಥಾನದಲ್ಲಿ ಅವನಿಗೆ ನೆರೆಊರಿನ ಈ ಉತ್ಸವ ನಿಮಿತ್ತ ಬಂದಿದ್ದ ಒಬ್ಬ ಪಂಡಿತನು ಕಾಣಿಸಿದನು. ವಿಷ್ಣು ಭಟ್ಟನು ಅವನಿಗೆ ನಮಸ್ಕರಿಸಿ ತನ್ನ ಕಷ್ಟಗಳನ್ನು ಹೇಳಿಕೊಂಡನು. ಈ ಕಷ್ಟಗಳಿಂದ ಹೊರಬೀಳುವ ಯಾವುದಾದರೂ ಉಪಾಯವನ್ನು ಹೇಳೆಂದು ಬೆನ್ನುಬಿದ್ದನು. ಆಗ ಆ ಪಂಡಿತನು ವಿಷ್ಣು ಭಟ್ಟನಿಗೆ ಹೀಗೆ ಹೇಳಿದನು. ತಮ್ಮಾ! ನಿನ್ನ ನೋವನ್ನು ನಾನು ತಿಳಿದೆನು. ಎಂಥವರಿಗಾದರೂ ಪೂರ್ವಜನ್ಮದ ಫಲವನ್ನು ಅನುಭವಿಸದೇ ತಪ್ಪದು ಅಲ್ವಾ? ನೀನು ಹಿಂದಿನ ಜನ್ಮದಲ್ಲಿ ಈ ಊರಿಗೆ ನಲವತ್ತು ಮೈಲು ದೂರದಲ್ಲಿರುವ ಅಚ್ಯುತಾಪುರಂನಲ್ಲಿರುವ ಆಂಜನೇಯಸ್ವಾಮಿಯ ದೇವಸ್ಥಾನದಲ್ಲಿ

ಪೂಜಾರಿಯು. ಆದರೇ ಆ ಜನ್ಮದಲ್ಲಿ ತುಂಬಾ ಪಾಪಕಾರ್ಯಗಳನ್ನು ಮಾಡಿದ್ದಿ. ದೇವಸ್ಥಾನದಲ್ಲಿ ದೇವರನ್ನು ಪೂಜಿಸುವ ಪೂಜಾರಿಯಾಗಿದ್ದು, ಯಾವುದೇ ನಿಯಮ - ನಿಷ್ಠೆಗಳನ್ನು ಆಚರಿಸದೇ ಪರಸ್ತ್ರೀ ವ್ಯಾಮೋಹ, ಕಳ್ಳತನದಂತಹಾ ದುರಾಚಾರಕ್ಕೆ ಒಳಗಾಗಿದ್ದೆ. ಹಾಗೇ ಮಾಡಿದ ಪಾಪಕಾರ್ಯದ ಫಲವಾಗಿ ಈ ಜನ್ಮದಲ್ಲಿ ಇಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದಿ. ಇದಕ್ಕೆ ಒಂದೇ ಒಂದು ಪರಿಹಾರವಿದೆ. ಕ್ರಮವಾಗಿ ಏಳು ಶನಿವಾರಗಳು ಮುಂಜಾನೆ ಶುಚಿಯಾಗಿ ಸ್ನಾನ ಮಾಡಿ, ನಿಯಮ - ನಿಷ್ಠೆಯಿಂದ ಪೂರ್ತಿ ಉಪವಾಸವಿದ್ದು ಈ ದೇವಸ್ಥಾನವನ್ನು ಸ್ವಚ್ಛಮಾಡಿ ದಿನವಿಡೀ ಆ ಸ್ವಾಮಿಯನ್ನು ನೆನೆಯುತ್ತಾ ದೇವಾಲಯವು ಶುಚಿಯಾಗಿರುವಂತೆ ನೋಡು. ಈ ವಿಧವಾಗಿ ಏಳು ಶನಿವಾರಗಳು ಆ ಸ್ವಾಮಿಯ ಸೇವೆಯನ್ನು ಮಾಡಿದರೆ, ನಿನ್ನ ಪೂರ್ವಜನ್ಮದ ಪಾಪವು ತೊಲಗಿ, ನಿನಗೆ ಒಳ್ಳೆಯದಾಗುತ್ತದೆ ಎಂದು ನುಡಿದನು. ವಿಷ್ಣು ಭಟ್ಟನು ಆ ಪಂಡಿತನಿಗೆ ನಮಸ್ಕರಿಸಿ ತಪ್ಪದೇ ಆ ವಿಧವಾಗಿ ಮಾಡುತ್ತೇನೆಂದನು.

ವಿಷ್ಣು ಭಟ್ಟನು ಆ ಪಂಡಿತನು ಹೇಳಿದಹಾಗೆ ಮಾಡಲು ನಿಶ್ಚಯಿಸಿ ಆ ವಾರದಲ್ಲೇ ಬಂದ ಶನಿವಾರದಿಂದ ಶುರುಮಾಡಿದನು. ಬೆಳಿಗ್ಗೆ ಸ್ನಾನವನ್ನು ಮಾಡಿ ಹನುಮಂತದೇವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಪೊರಕೆ ತೆಗೆದುಕೊಂಡು ದೇವಸ್ಥಾನವನ್ನೆಲ್ಲಾ ಅಂದವಾಗಿ ಗುಡಿಸಿದನು. ಅಂಗವಿಕಲತೆಯಿಂದ ಶರೀರಕ್ಕೆ ಸ್ವಲ್ಪ ಆಯಾಸವಾಯಿತು. ಆದರೂ ಬಿಡದೇ ರಾತ್ರಿ ತನಕ ದೇವಸ್ಥಾನದಲ್ಲೇ ಇದ್ದು ರಾತ್ರಿ ಸ್ವಾಮಿಯ ಪ್ರಸಾದವನ್ನು ತೆಗೆದುಕೊಂಡು ಮನೆಗೆ ಹೋದನು. ಹೀಗೆ ಆರು ವಾರಗಳ ವರೆಗೆ ನಿಯಮ-ನಿಷ್ಠೆಯಿಂದ ಆ ಪಂಡಿತನು ಹೇಳಿದ ಹಾಗೆ ಸ್ವಾಮಿಯ ಸೇವೆಯನ್ನು ಮಾಡಿದನು.

ಹೀಗೆ ಆರು ವಾರಗಳು ಕಳೆದವು. ಏಳನೇ ಶನಿವಾರ ಬಂತು. ಮುಂಜಾನೆ ಸ್ನಾನವನ್ನು ಮಾಡಿ ಶುಭ್ರವಾದ ಧೋತಿ ಉಟ್ಟು ದೇವಸ್ಥಾನಕ್ಕೆ ಬಂದನು. ಅದಕ್ಕೆ ಹಿಂದಿನ ರಾತ್ರಿ ಬಂದ ದೊಡ್ಡ ಮಳೆಗಾಳಿಯಿಂದ ದೇವಸ್ಥಾನವೆಲ್ಲವೂ ಉದುರಿದ ಮರದ ಎಲೆಗಳಿಂದ, ತುಂಬಾ ಧೂಳಿನಿಂದ ಕೂಡಿತ್ತು. ದೇವಸ್ಥಾನವನ್ನೆಲ್ಲಾ ಸ್ವಚ್ಛ ಮಾಡುವಷ್ಟೋತ್ತಿಗೆ ಮಧ್ಯಾಹ್ನ ಎರಡು ಗಂಟೆಯಾಯಿತು.  ತುಂಬಾ ಆಯಾಸದಿಂದ ಅಲ್ಲಿಯೇ ದೇವಸ್ಥಾನದ ಮಂಟಪದ ಕಂಬಕ್ಕೆ ಒರಗಿ ಅಲ್ಲಿಯೇ ನಿದ್ರೆಗೆ ಜಾರಿದನು. ಆ ನಿದ್ರೆಯಲ್ಲಿ ವಿಷ್ಣು ಭಟ್ಟನಿಗೆ ಒಂದು ಕನಸ್ಸು ಬಂತು. ಆ ಕನಸ್ಸಿನಲ್ಲಿ ಬಹಳ ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಹನುಮಂತದೇವರು ದರ್ಶನಕೊಟ್ಟರು. ಕನಸ್ಸಿನಲ್ಲಿ ಸ್ವಾಮಿಯು ವಜ್ರ ವೈಡೂರ್ಯಗಳಿಂದ ಮೆರೆಯುತ್ತಿರುವ ಕಿರೀಟವನ್ನು ಧರಿಸಿದ್ದಾರೆ. ಕತ್ತಿನಲ್ಲಿ ಬಹಳ ಪ್ರಕಾಶಿಸುತ್ತಿರುವ ಕಂಠಾಭರಣ, ಅದ್ಭುತವಾದ ಹೂವಿನಮಾಲೆ... ಕಿವಿಯಲ್ಲಿ ದಿವ್ಯವಾದ ಸುವರ್ಣ ಕರ್ಣಾಭರಣಗಳು... ಕೈಗಳಿಗೆ, ಕಾಲುಗಳಿಗೆ ಬಂಗಾರದ ಕಡಗಗಳು...     ಆ ಸ್ವಾಮಿಯು ಬಹಳ ದಿವ್ಯಾಭರಣಗಳಿಂದ, ಮೃದು ಮಂದಹಾಸದಿಂದ, ಕಣ್ಣುಗಳಲ್ಲಿ ಕರುಣಾರಸ ತುಂಬಿಕೊಂಡು ವಿಷ್ಣು ಭಟ್ಟನಿಗೆ ದಿವ್ಯದರ್ಶನವನ್ನು ಪ್ರಸಾದಿಸಿದನು.

ವಿಷ್ಣು ಭಟ್ಟನು ಆ ಸ್ವಾಮಿಗೆ ನಮಸ್ಕರಿಸಿ, ಅನೇಕ ವಿಧಗಳಿಂದ ಸ್ತುತಿಸಿದನು. ಆ ಸ್ವಾಮಿಯು ಅನುಗ್ರಹಿಸಿದ ಅದ್ಭುತ ದರ್ಶನಕ್ಕೆ ಸಂತೋಷಿಸುತ್ತಿರುವಾಗ, ಒಮ್ಮೆಲೇ ಎಚ್ಚರಿಕೆಯಾಯಿತು. ಕಣ್ಣುಗಳನ್ನು ತೆರೆದು ಕನಸ್ಸಿನಲ್ಲಿ ಅಂತಹ ದಿವ್ಯದರ್ಶನವು ಸಿಕ್ಕಿದಕ್ಕೆ ಸಂತೋಷಿಸುತ್ತಿರುವಾಗ, ಎಲ್ಲಿಂದ ಬಂತೋ ಒಂದು ವಾನರವು ಪಕ್ಕದಲ್ಲಿದ್ದ ಮರದ

ಮೇಲಿಂದ ಕೆಳಕ್ಕೆ ಜಿಗಿದು, ವಿಷ್ಣು ಭಟ್ಟನ ಕಡೆಗೆ ಬೇಗ ಬೇಗನೆ ಬಂದು ತನ್ನ ಕೈಯಿಂದ ವಿಷ್ಣು ಭಟ್ಟನ ಬೆನ್ನಿನ ಮೇಲೆ ಒಂದೇಸಲ ಪರಚಿ ಅದೇವೇಗದಿಂದ ಹಿಂತಿರುಗಿ ಮರದ ಮೇಲೆ ಹಾರಿ ಕ್ಷಣದಲ್ಲಿ ಮಾಯವಾಯಿತು. ಒಮ್ಮೆಲೇ ನಡೆದ ಈ ಘಟನೆಗೆ ವಿಷ್ಣು ಭಟ್ಟನು ಬೆರಗಾದನು. ದೇಹವೆಲ್ಲಾ ಬೆವರಿತು. ಈ ವಾನರವು ಏನು? ತನ್ನ ಹತ್ತಿರ ಬರುವುದೇನು? ಎಂದು ಯೋಚಿಸುತ್ತಿರುವಾಗ ಒಂದು ಅದ್ಭುತವನ್ನು ಗಮನಿಸಿದನು. ತನ್ನ ಊನತನವು ಪೂರ್ತಿಯಾಗಿ ಮಾಯವಾಗಿದೆ. ಅಷ್ಟೇಅಲ್ಲ, ವಿಷ್ಣು ಭಟ್ಟನ ಚರ್ಮವ್ಯಾಧಿ ಕ್ಷಣದಲ್ಲಿ ಮಾಯವಾಗಿದೆ. ಶರೀರಕ್ಕೆಲ್ಲಾ ಬಹಳ ಶಕ್ತಿ ತುಂಬಿದ ಹಾಗೆ ಅನಿಸಿತು. ಅದೆಲ್ಲಾ ಆ ಹನುಮಂತ ದೇವರ ಅನುಗ್ರಹವೆಂದು ತಿಳಿದನು. ಬಂದದ್ದು ತನಗೆ ಕನಸ್ಸಿನಲ್ಲಿ ಕಾಣಿಸಿದ ಸಾಕ್ಷಾತ್ ಆನಂದ ಆಂಜನೇಯ ದೇವರೆಂದು ತಿಳಿದನು. ಆಹಾ! ಆಂಜನೇಯ ಆನಂದ ಸ್ವರೂಪ, ಭಕ್ತವತ್ಸಲ ಈಗ ನನ್ನನ್ನು ಅನುಗ್ರಹಿಸಿದ್ದೀಯಾ ತಂದೇ. ಇದೋ ನಿನಗೆ ನನ್ನ ನಮಸ್ಕಾರಗಳು. ಓ ಕರುಣಾಮೂರ್ತಿ! ಓ ಪವನಪುತ್ರಾ! ಓ ಭಕ್ತಾಧೀನಾ! ಓ ಆಶ್ರಿತಜನ ರಕ್ಷಕ! ಎಂದು ಎಷ್ಟೋ ವಿಧಾನಗಳಿಂದ ಆ ಸ್ವಾಮಿಯನ್ನು ಕೊಂಡಾಡಿದನು. ಆ ವಿಧವಾಗಿ ವಿಷ್ಣು ಭಟ್ಟನು ಪೂರ್ತಿ ಆರೋಗ್ಯವಂತನಾಗಿ ಆನಂತರದ ಕಾಲದಲ್ಲಿ ದೊಡ್ಡ ಪುರೋಹಿತನಾಗಿ ಹೆಸರು ಕೀರ್ತಿಗಳನ್ನು ಹೊಂದಿ, ಬಹಳ ಧನವನ್ನೂ ಸಂಪಾದಿಸಿದನು. ವಿಷ್ಣು ಭಟ್ಟನ ಕುಟುಂಬವೆಲ್ಲಾ ಶ್ರೀ ಆಂಜನೇಯರ ಸೇವೆಯನ್ನು ಮಾಡುತ್ತಾ ಜೀವಿಸಿದಷ್ಟು ಕಾಲ ಸುಖ - ಸಂತೋಷದಿಂದ ಖುಷಿಯಾಗಿ ಜೀವಿಸಿದರು.

ಹನುಮಂತ ದೇವರು ಭಕ್ತಸುಲಭನು. ತನ್ನನ್ನು ನಂಬಿದವರ ಯಾವುದೇ ಕಷ್ಟಗಳಿಂದಲೂ ಹೊರತರುವ ಭಕ್ತವತ್ಸಲನು. ಯಾವ ಭಕ್ತನು ತನ್ನನ್ನು ನಿಷ್ಕಲ್ಮಶವಾದ ಭಕ್ತಿಯಿಂದ ಆರಾಧಿಸುತ್ತಾನೋ ಅವನನ್ನು ತನ್ನ ದಿವ್ಯದರ್ಶನದಿಂದ ಸಂತೋಷದಲ್ಲಿ ಮುಳುಗಿಸುತ್ತಾನೆ. ತನ್ನನ್ನು ನಿರ್ಮಲ ಮನಸ್ಸಿನಿಂದ ಪೂಜಿಸುವವರನ್ನು ಎಲ್ಲಾ ಸಮಯದಲ್ಲೂ ಕಾಪಾಡುತ್ತಿರುತ್ತಾನೆ. ಆ ಸ್ವಾಮಿಯನ್ನು ನಿತ್ಯವೂ ಸ್ಮರಿಸುವವರಿಗೆ ಯಾವುದೇ ಆಪತ್ತು ಬರುವುದಿಲ್ಲ. ಸರ್ವಕಾರ್ಯಗಳಲ್ಲೂ ಜಯ ದೊರಕುತ್ತದೆ.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು
ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥
*********

ಮೂರನೇ ಅಧ್ಯಾಯ

## ಸುಬ್ಬು ಶೆಟ್ಟಿಯ ಕಥೆ

ಆಂಜನೇಯನು ಚಿರಂಜೀವಿಯು. ಅತ್ಯಂತ ಪರಾಕ್ರಮನು. ಮಹಾಶಕ್ತಿಸಂಪನ್ನನೂ ಆದ ಹನುಮಂತದೇವರು ಇವತ್ತಿಗೂ ಇದ್ದಾರೆ. ತನ್ನನ್ನು ನಂಬಿ ಪೂಜಿಸುವ ಭಕ್ತರನ್ನು ಮಾರುತಿಯು ಸದಾ ಕಣ್ಣಿನ ರೆಪ್ಪೆಯಹಾಗೆ ಕಾಪಾಡುತ್ತಿರುತ್ತಾನೆ. ಆ ಸ್ವಾಮಿಯನ್ನು ನೆನೆದರೆ ತಕ್ಷಣವೇ ಯಾವುದೋ ಒಂದು ರೂಪದಲ್ಲಿ ನಮ್ಮ ಹತ್ತಿರಬಂದು ನಮಗೆ ಬಹಳ ಧೈರ್ಯವನ್ನು ಕೊಡುತ್ತಾನೆ. ಯಾವುದೋ ಪಕ್ಷಿಯ ರೂಪದಲ್ಲೋ ಹತ್ತಿರ ಬಂದು ನಮ್ಮ ಭಯವನ್ನು ಹೋಗಲಾಡಿಸುತ್ತಾನೆ. ಮನಸಾರೇ ಆ ಸ್ವಾಮಿಯನ್ನು ಸ್ಮರಿಸಿದರೆ ಸರಿ, ಕೂಡಲೇ ಬಂದು ನಮ್ಮನು ಅಪ್ಪಿಕೊಳ್ಳುತ್ತಾನೆ.

ಪೂರ್ವಕಾಲದಲ್ಲಿ ಆಂಧ್ರಪ್ರದೇಶದಲ್ಲಿ ಧರ್ಮಪುರಂವೆಂಬ ಊರಿತ್ತು. ಆ ಊರಲ್ಲಿ ಸುಬ್ಬು ಶೆಟ್ಟಿ ಎಂಬ ವ್ಯಾಪಾರಿಯು ಇರುತ್ತಿದ್ದ. ಚಿಕ್ಕ ಚಿಕ್ಕ ವ್ಯಾಪಾರವನ್ನು ಪ್ರಾರಂಭಿಸಿ ಕಾಲ ಕೂಡಿ ಬಂದಿದ್ದರಿಂದ ಸ್ವಲ್ಪ ಸಮಯದಲ್ಲೇ ತುಂಬಾ ಸ್ಥಿತಿವಂತನಾದನು. ವ್ಯಾಪಾರವನ್ನು ತುಂಬಾ ವಿಸ್ತರಿಸಿದನು. ಮೇಲಿನ ನೋಟಕ್ಕೆ ದೈವಭಕ್ತಿಯವನ ಹಾಗೆ ಕಾಣುತ್ತಿದ್ದರೂ, ಒಳಗೊಳಗೇ ಬಹಳ ಜಿಪುಣತನದಿಂದ ಕೂಡಿದ್ದ. ತನ್ನ ಹತ್ತಿರ ಕೆಲಸ ಮಾಡುವವರನ್ನು ಚೆನ್ನಾಗಿ ಕಾಣುತ್ತಿರಲಿಲ್ಲ. ಯಾವುದಾದರೂ ಭಾಗವತ್ ಕಾರ್ಯಕ್ಕೆ ನೂರು ರೂಪಾಯಿಯನ್ನು ದಾನ ಮಾಡಿದರೆ, ಅದಕ್ಕೆ ಹತ್ತು ಪಟ್ಟು ಲಾಭ ಬರುವವರೆಗೆ ಎಷ್ಟೇ ಬಡವನಿದ್ದರೂ ಹತ್ತು ಪೈಸೆ ಕೂಡಾ ಕೊಡುತ್ತಿರಲಿಲ್ಲ.

ಆ ಊರಲ್ಲಿ ಬಹಳ ಅದ್ಭುತವಾದ ಆಂಜನೇಯಸ್ವಾಮಿಯ ದೇವಸ್ಥಾನವಿತ್ತು. ಸುಬ್ಬು ಶೆಟ್ಟಿಯೂ ಪ್ರತಿ ತಿಂಗಳೂ ದೇವಸ್ಥಾನಕ್ಕೆ ಹೋಗುತ್ತಿದ್ದ. ನಾಲ್ಕು ಆಣೆಯ ಅರ್ಚನೆ ಮಾಡಿಸಿ, ಮನೆಗೆ ಸರಿಪಡುವಷ್ಟು ನೈವೇದ್ಯವನ್ನು ಪೊಟ್ಟಣ ಕಟ್ಟಿಸಿಕೊಂಡೇ ತೆಗೆದುಕೊಂಡು ಹೋಗುತ್ತಿದ್ದ. ಆ ದಿನ ಶನಿವಾರ. ಹನುಮಂತ ದೇವರಿಗೆ ದಿವ್ಯವಾದ ನಿತ್ಯಪೂಜೆಯು ಜರುಗುತ್ತಿತ್ತು. ಬಹಳ ಭಕ್ತರು ಬಂದು ಸ್ವಾಮಿಯವರನ್ನು ದರ್ಶಿಸಿಕೊಂಡು ಹೋಗುತ್ತಿದ್ದರು. ಇಷ್ಟರಲ್ಲಿ ಸುಬ್ಬು ಶೆಟ್ಟಿಯೂ ಕೂಡ ಬಂದನು. ಪ್ರತಿಸಾರಿಯ ಹಾಗೆ ನಾಲ್ಕಾಣೆ ಕೊಟ್ಟು ಅರ್ಚಕನನ್ನು ಗಟ್ಟಿಯಾಗಿ ಕೇಳಿ ದೊಡ್ಡ ಪೊಟ್ಟಣದ ತುಂಬಾ ಪ್ರಸಾದವನ್ನು ತೆಗೆದುಕೊಂಡು, ತನ್ನ ಎತ್ತಿನ ಬಂಡಿಯನ್ನು ಹತ್ತಿ ಮನೆ ದಾರಿಹಿಡಿದನು. ಸ್ವಲ್ಪದೂರ ಹೋಗುವಷ್ಟರಲ್ಲಿ ಆ ಊರಿನ ಜಮೀನ್ದಾರನ ಗಾಡಿ ಎದುರಾಯಿತು. ಸುಬ್ಬು ಶೆಟ್ಟಿಯು ಕೂಡಲೇ ಗಾಡಿಯಿಂದ ಕೆಳಗಿಳಿದು ಜಮೀನ್ದಾರನಿಗೆ ನಮಸ್ಕರಿಸಿ ಕುಶಲಪ್ರಶ್ನೆಗಳನ್ನು ಕೇಳಿದನು. ಆಗ ಜಮೀನ್ದಾರನು ಸುಬ್ಬು ಶೆಟ್ಟಿಗೆ : ತನಗೆ ಇಲ್ಲಿಂದ ನಲವತ್ತು ಮೈಲು ದೂರದಲ್ಲಿರುವ ರಾಮಾಪುರಂನ ಧನಿಕನ ಮನೆಯಿಂದ ಕರೆ ಬಂದಿದೆ, ಒಂದು ವಾರದಲ್ಲಿ ನೂರು ಕಿಲೋ ತೊಗರಿಬೇಳೆ ಬೇಕೆಂದು ಹೇಳಿದ್ದಾನೆಂದು, ಅದನ್ನು ಸುಬ್ಬು ಶೆಟ್ಟಿಯು ಒಟ್ಟುಮಾಡಿ ಕೊಡಬಹುದೇನೋ ಎಂದು ಕೇಳಲು ತಾನೇ ಬರುವವನಿದ್ದೆ ಎಂದು ಜಮೀನ್ದಾರನು ಹೇಳಿದನು. ಆ ಮಾತನ್ನು ಕೇಳಿದ ಸುಬ್ಬು ಶೆಟ್ಟಿಯ ಬಾಯಲ್ಲಿ ಮಾತುಹೊರಡಲಿಲ್ಲ. ಸಂತೋಷದಿಂದ ಮುಳುಗಿಹೋದನು. ನೂರು ಕಿಲೋಗಳು ಎಂದರೇ ಎಷ್ಟು ಲಾಭ? ಎಂಥಹ ಒಳ್ಳೆಯ ವ್ಯಾಪಾರ ಸಿಕ್ಕಿತು? ಎಂದುಕೊಂಡು ತಪ್ಪದೇ ತಾನು ವಾರದಲ್ಲಿ ಆ ಊರಿಗೆ ಕಳಿಸುತ್ತೇನೆಂದು ಜಮೀನ್ದಾರನಿಗೆ ಹೇಳಿದನು. ಜಮೀನ್ದಾರನು ತಿರುಗಿ ಗಾಡಿಹತ್ತಿ ತನ್ನ ದಾರಿಯಲ್ಲಿ ತಾನು ಹೋದನು. ಸುಬ್ಬು ಶೆಟ್ಟಿಯು ಕೂಡ ತನ್ನ ಗಾಡಿಹತ್ತಿ ಮನೆಕಡೆ ಮುಖಮಾಡಿ ಹೊರಟನು.

ಗಾಡಿಯಲ್ಲಿ ಕುಳಿತ ಸುಬ್ಬು ಶೆಟ್ಟಿಗೆ ಸಂತೋಷವನ್ನು ಅದುಮಿಟ್ಟುಕೊಳ್ಳಲಾಗುತ್ತಿಲ್ಲ. ನೂರು ಕಿಲೋ ತೊಗರಿಬೇಳೆ ಎಂದರೇ ಸಾಮಾನ್ಯವೇ? ಎಷ್ಟು ಲಾಭವನ್ನು ಸಂಪಾದಿಸಬಹುದು? ಎಂದು ನೆನೆದು ಸಂತೋಷಪಟ್ಟನು. ಇಷ್ಟರಲ್ಲಿ ತನ್ನ ಮನೆ ಬಂತು. ಬ್ರಹ್ಮಾಂಡವಾದ ವ್ಯಾಪಾರ ಬಂದ ಸಂತೋಷದಲ್ಲಿ ಹನುಮಂತ ದೇವರ ಪ್ರಸಾದದ ಸಂಗತಿಯನ್ನು ಮರೆತುಬಿಟ್ಟನು. ಮನೆಯೊಳಗೇ ಹೋದಕೂಡಲೇ ಬಹಳ ಹಾಡಾಹುಡಿಯನ್ನು ಮಾಡುತ್ತಾ ಹೆಂಡತಿಗೆ ಈ ತೊಗರಿಬೇಳೆಯ ಬಗ್ಗೆ ಹೇಳಿದನು. ಊಟ ಮುಗಿಸಿ ಮಲಗಿದ್ದನಾಷ್ಟೇ ಧ್ಯಾನವೆಲ್ಲಾ ಆ ತೊಗರಿಬೇಳೆಯ ಮೇಲೆಯೇ. ಎಷ್ಟು ಲಾಭವನ್ನು ಮಾಡಿಕೊಂಡು ಮಾರುವುದು. ಸ್ವಲ್ಪ ಅಗ್ಗದ ದರದ ಬೇಳೆಯನ್ನು ಕಳಿಸಿದರೆ ಮತ್ತಷ್ಟು ಲಾಭವನ್ನು ಸಂಪಾದಿಸಬಹುದು ಅಲ್ವಾ! ಎಂದು ಹೀಗೆ ಆಲೋಚಿಸುತ್ತಾ ನಿದ್ರೆಹೋದನು. ಪ್ರಸಾದದ

ಸಂಗತಿ ಅವನಿಗೆ ನೆನಪು ಬರಲಿಲ್ಲ. ಇಷ್ಟರಲ್ಲಿ ಬೆಳಗಾಯಿತು. ಮುಂಜಾನೆ ಸ್ನಾನವನ್ನು ಮುಗಿಸಿ ಬರುವಾಗ ಸುಬ್ಬು ಶೆಟ್ಟಿಗೆ ಎದುರು ಗೋಡೆಮೇಲಿರುವ ಹನುಮಂತದೇವರ ಚಿತ್ರಪಟ ಕಾಣಿಸಿತು. ಒಮ್ಮೆಲೇ ಸುಬ್ಬು ಶೆಟ್ಟಿಗೆ ಸ್ವಾಮಿಯ ಪ್ರಸಾದದ ನೆನಪು ಬಂತು. ಮನೆಯಿಂದ ಹೊರಬಂದು ಗಾಡಿಯ ಹತ್ತಿರ ಹೋಗಿ ಒಳಗೆ ನೋಡಿದನು. ಪ್ರಸಾದವನ್ನೆಲ್ಲಾ ಇರುವೆಗಳು ತಿಂದಿವೆ. ಸ್ವಲ್ಪ ಕೂಡ ಮಿಗಿಯಲ್ಲಿಲ್ಲ. ರಾಮ ರಾಮ, ಎಂದುಕೊಂಡು ಮನೆಯೊಳಗೇ ಹೋದನು.

ಶ್ರೀ ಸ್ವಾಮಿಯ ಪ್ರಸಾದವನ್ನು ನಿರ್ಲಕ್ಷ್ಯ ಮಾಡಿದ್ದಕ್ಕೆ ಸ್ವಾಮಿಗೆ ಕೋಪ ಉಂಟಾಯಿತು. ಯಾವುದೇ ಪರಿಸ್ಥಿತಿಯಲ್ಲೂ ಯಾವ ದೇವರ ಪ್ರಸಾದವನ್ನೂ ಯಾರೂ ನಿರ್ಲಕ್ಷ್ಯ ಮಾಡಬಾರದು. ದೇವರಿಗೆ ನಿವೇದಿಸಿದ ಪ್ರಸಾದದಲ್ಲಿ ಅತ್ಯದ್ಭುತವಾದ ಶಕ್ತಿ ಇರುತ್ತದೆ. ಆ ಪ್ರಸಾದವನ್ನು ಸ್ವೀಕರಿಸಿದರೆ ನಮಗೆ ಬಹಳ ಆರೋಗ್ಯ ಕಲುಗುತ್ತದೆ. ಯಾವರೀತಿಯ ರೋಗವಾದರೂ ಕ್ಷಣದಲ್ಲಿ ಗುಣವಾಗುತ್ತದೆ. ಹನುಮಂತದೇವರ ಪ್ರಸಾದವನ್ನು ನಿರ್ಲಕ್ಷ ಮಾಡುವುದರಿಂದ ಸ್ವಾಮಿಗೆ ಸುಬ್ಬು ಶೆಟ್ಟಿಯ ಮೇಲೆ ಕೋಪ ಉಂಟಾಯಿತು. ಧನದ ಮೇಲಿನ ವ್ಯಾಮೋಹದಿಂದ ಪ್ರಸಾದವನ್ನು ಕೂಡ ನಿರ್ಲಕ್ಷ ಮಾಡಿದನೆಂದು ಸ್ವಾಮಿಯರಿಗೆ ಕೋಪ ಉಂಟಾಯಿತು. ಅಂತಹ ಪಾಪಮಾಡಿದ ಸುಬ್ಬು ಶೆಟ್ಟಿಗೆ ಹೇಗಾದರೂ ಬುದ್ಧಿ ಹೇಳಬೇಕೆಂದುಕೊಂಡನು.

ಅನಂತರ ನಾಲ್ಕು ದಿನಗಳಲ್ಲಿ ಸುಬ್ಬು ಶೆಟ್ಟಿಯು ನೂರು ಕಿಲೋಗಳ ತೊಗರಿಬೇಳೆಯ ಮೂಟೆಯನ್ನು ಕೊಟ್ಟು ಗುಮಾಸ್ತನೊಟ್ಟಿಗೆ ಗಾಡಿಗೆ ಹತ್ತಿಸಿ ರಾಮಪುರಂಗೆ ಕಳುಹಿಸಿದನು. ಆ ಗಾಡಿಯು ಊರು ದಾಟಿ ಸ್ವಲ್ಪದೂರ ಹೋದಾಗ ಎಲ್ಲಿಂದ ಬಂತೋ ಏನೋ ಒಂದು ದೊಡ್ಡ ವಾನರಹಿಂಡು ಬಂದು ಆ ಗಾಡಿಯ ಮೇಲೆ ಹಾರಿತು. ಗಾಡಿಯವನು ಭಯದಿಂದ ಒಮ್ಮೆಲೇ ಗಾಡಿ ಯಿಂದ ಇಳಿದು ಓಡಿದನು. ಆ ಮಂಗಗಳು ಗುಮಾಸ್ತನ ಮೇಲೆ ಕೂಡ ನೆಗೆಯುವುದರಿಂದ ಅವನು ಕೂಡಾ ಇಳಿದು ದೂರಕ್ಕೆ ಓಡಿದನು. ಕೋತಿಗಳೆಲ್ಲಾ ತೊಗರಿಬೇಳೆಯ ಮೂಟೆಯನ್ನು ಹರಿದು, ನೆಲದಮೇಲೆ ಚದುರಿಸಿ ತಮ್ಮ ಮುಷ್ಟಿಯಿಂದ ತೆಗೆದುಕೊಂಡು ಇಷ್ಟ ಬಂದ ಹಾಗೆ ಸುತ್ತಮುತ್ತಾ ಪೊದೆಗಳ ಮೇಲೆ ಬಿಸಾಡಿದವು. ಜರುಗಿದ ಸಂಗತಿಯನ್ನು ತಿಳಿದು ಸುಬ್ಬು ಶೆಟ್ಟಿಯು ಬಹಳ ಬಾಧೆಪಟ್ಟನು. ಎಷ್ಟು ಧನವು ವ್ಯರ್ಥವಾಯಿತೋ ತಿಳಿದನು. ಆನಂತರ, ಸುಬ್ಬು ಶೆಟ್ಟಿಯ ವ್ಯಾಪಾರವೂ ಕೂಡಾ ಪೆಟ್ಟು ತಿಂದು, ಧೀರ್ಘವಾದ ರೋಗಕ್ಕೆ ತುತ್ತಾಗಿ ಮಂಚ ಹಿಡಿದು ಕೆಲವು ದಿನಗಳಲ್ಲಿ ಇಹಲೋಕ ತ್ಯಜಿಸಿದನು.

ಹನುಮಂತ ದೇವರ ಪ್ರಸಾದವನ್ನು ನಿರ್ಲಕ್ಷ್ಯವನ್ನು ಮಾಡಿದ ಪಾಪದಿಂದ ಸುಬ್ಬು ಶೆಟ್ಟಿಯು ಮರುಜನ್ಮದಲ್ಲಿ ಕತ್ತೆಯಾಗಿ ಜನಿಸಿದನು. ಯಜಮಾನನು ಬೆನ್ನಿನ ಮೇಲೆ ಹೇರುವ ಭಾರವನ್ನು ಹೊರುತ್ತಾ ದುರ್ಭರವಾದ ಜೀವನವನ್ನು ಸಾಗಿಸಿದನು. ಬೆನ್ನ ಮೇಲಿನ ಭಾರದ ಒತ್ತಡದಿಂದ ಗಾಯವಾಗಿ ತಳಮಳಿಸುತ್ತಿದ್ದರೂ ಕೂಡಾ ಯಜಮಾನನು ನಿರ್ದಾಕ್ಷಿಣ್ಯವಾಗಿ ಮತ್ತಷ್ಟು ಭಾರವನ್ನು ಹಾಕಿ ಹೊರಿಸುತ್ತಿದ್ದನು. ಹೀಗೆ ಕೆಲವು ಕಾಲ ಬಹಳ ದುರ್ಭರವಾದ ಜೀವನವನ್ನು ಕಳೆದು ಒಂದುದಿನ ಈ ಲೋಕವನ್ನು ಬಿಟ್ಟನು. ಸುಬ್ಬು ಶೆಟ್ಟಿಯು ಮರುಜನ್ಮದಲ್ಲಿ ಇಲಿಯಾಗಿ ಜನ್ಮಿಸಿದನು. ಭಗವಂತನ ವಿಷಯದಲ್ಲಿ ಮಾಡಿದ ಯಾವ ಪಾಪವಾದರೂ ಜನ್ಮ ಜನ್ಮಗಳಲ್ಲಿ ಬಾಧಿಸುತ್ತದೆ. ಅಷ್ಟು ಬೇಗನೇ ಬಿಟ್ಟುಹೋಗುವುದಿಲ್ಲ. ಅದರಲ್ಲೂ ಹನುಮಂತ ದೇವರ ಕೋಪಕ್ಕೆ ತುತ್ತಾದವರು ಮತ್ತಷ್ಟು ಶಿಕ್ಷೆಯನ್ನು ಅನುಭವಿಸುತ್ತಾರೆ.

ಇಲಿಯಾಗಿ ಜನಿಸಿದ ಸುಬ್ಬು ಶೆಟ್ಟಿಯೂ ಗೋದಾಮುಗಳಲ್ಲಿ, ಹೊಲಗದ್ದೆಗಳಲ್ಲಿ ಓಡಾಡುತ್ತಾ ಕಾಲಕಳೆದು ಕೊನೆಗೆ ಒಂದುದಿನ ಒಂದು ಬೆಕ್ಕಿನ ಕಣ್ಣಿಗೆ ಬಿದ್ದು ಘೋರವಾಗಿ ಕೊಲ್ಲಲ್ಪಟ್ಟನು. ಆ ತರುವಾಯ ಜನ್ಮದಲ್ಲಿ ಸುಬ್ಬು ಶೆಟ್ಟಿಯು ಗಿಳಿ ರೂಪದಲ್ಲಿ ಜನಿಸಿದನು. ಆ ಗಿಳಿಯು ಆ ಮರ, ಈ ಮರದ ಮೇಲೆ ಹಾರುತ್ತಾ ಒಂದುದಿನ ಧರ್ಮಪುರಂನ ಆಂಜನೇಯಸ್ವಾಮಿಯ ದೇವಸ್ಥಾನವನ್ನು ಸೇರಿತು. ಆ ದೇವಸ್ಥಾನದ ಆವರಣದಲ್ಲಿದ್ದ ಮರದ ಮೇಲೆ ಇಳಿದಾಗ ಗಿಳಿಗೆ ತನ್ನ ಪೂರ್ವಜನ್ಮದ ವೃತಾಂತವು ನೆನಪಾಯಿತು. ಸ್ವಾಮಿಯ ಪ್ರಸಾದವನ್ನು ನಿರ್ಲಕ್ಷ ಮಾಡಿದ್ದಕ್ಕೆ ಇಷ್ಟು ಕಷ್ಟಗಳನ್ನು ಪಡಬೇಕಾಯಿತೆಂದು ತಿಳಿದನು. ತನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಬೇಕೆಂದು ಆಲೋಚಿಸಿತು. ಆ ಮರದ ಮೇಲೆಯೇ ಇದ್ದು, ಭಕ್ತರು ತಿಂದು ಬಿಸಾಡಿದ ಎಂಜಲು ದೊಣ್ಣೆಗಳಲ್ಲಿ ಇದ್ದ ಅಕ್ಕಿಕಾಳನ್ನು ತಿನ್ನುತ್ತಾ ಕಾಲವನ್ನು ಕಳೆಯತೊಡಗಿದನು. ದಿನಾಲೂ ಆವರಣದಲ್ಲಿ ಆಚೆ-ಈಚೆ ಹಾರುತ್ತಾ ನೆಲದ ಮೇಲೆ ಎಲ್ಲೇ ಪ್ರಸಾದದ ಚೂರು ಬಿದ್ದರೂ, ಅಕ್ಕಿಕಾಳು ಕಾಣಿಸಿದರೂ ಅದನ್ನು ಬಾಯಲ್ಲಿ ಕಚ್ಚಿಕೊಂಡು ಮರದಮೇಲೆ ಹತ್ತಿ ಅದೇ ಮಹಾಭಾಗ್ಯವೆಂದು ಗಿಳಿರೂಪದಲ್ಲಿ ಜನಿಸಿದ ಸುಬ್ಬು ಶೆಟ್ಟಿಯು ತಿನ್ನುತ್ತಿದ್ದ. ಈ ವಿಧವಾಗಿ ವರ್ಷವನ್ನು ಕಳೆದಾಗ ಒಂದುದಿನ ಬಂದ ದೊಡ್ಡ ಗಾಳಿಮಳೆಯನ್ನೂ ತಡೆಯಲಾರದೇ ಮರಣಹೊಂದಿದನು. ದಿನಾಲೂ ಹೀಗೆ ಸ್ವಾಮಿಯ ಪ್ರಸಾದವನ್ನು ತಿಂದ ಪುಣ್ಯದಿಂದ ತಿರುಗಿ ಮಾನವ ಜನ್ಮವೆತ್ತಿ ಅದೇ ಊರಲ್ಲಿ ಅರ್ಚಕರ ಕುಟುಂಬದಲ್ಲಿ ಜನ್ಮಿಸಿ ಶ್ರೀ ಆಂಜನೇಯ ದೇವರನ್ನು ನಿತ್ಯ ಸೇವಿಸುತ್ತಾ ಧರ್ಮಪಥದಲ್ಲಿ ಜೀವಿಸಿದನು. ಬಹಳ ಒಳ್ಳೆಯ ಅರ್ಚಕನಾಗಿ, ಸ್ವಾಮಿಯ ಪ್ರಿಯಭಕ್ತನಾಗಿಯೂ ಹೆಸರನ್ನು ಸಂಪಾದಿಸಿ ಜೀವಿಸಿದಷ್ಟು ಕಾಲ ಸುಖವಾಗಿ ಜೀವಿಸಿ ಕೊನೆಗೆ ಮುಕ್ತಿಯನ್ನು ಪಡೆದನು.

ಶ್ರೀ ಆಂಜನೇಯಸ್ವಾಮಿಯವರ ಪ್ರಸಾದಕ್ಕಿರುವ ಮಹಿಮೆ ಅಂಥದ್ದು. ಆ ಸ್ವಾಮಿಗೆ ನಿವೇದಿಸಿದ ಯಾವ ಪದಾರ್ಥವಾದರೂ ಅಮೃತತುಲ್ಯವಾಗುತ್ತದೆ. ಭಕ್ತಿಯಿಂದ ಸ್ವೀಕರಿಸಿದವರ ಸರ್ವರೋಗಗಳು ನಶಿಸುತ್ತವೆ. ಹೊಸ ತೇಜಸ್ಸು ಉಂಟಾಗುತ್ತದೆ. ಯಾವುದೇ ಆಪತ್ತುಗಳು ಉಂಟಾಗುವುದಿಲ್ಲ. ಕೈಹಿಡಿದ ಎಲ್ಲಾ ಕಾರ್ಯಗಳಲ್ಲೂ ಜಯ ಉಂಟಾಗುತ್ತದೆ.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು

ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥

*************

ನಾಲ್ಕನೇ ಅಧ್ಯಾಯ

## ಶ್ರೀ ಆನಂದ ಆಂಜನೇಯ ದಿವ್ಯಕಥೆ

ಪೂರ್ವಕಾಲದಲ್ಲಿ ಕಲಿಂಗದೇಶದಲ್ಲಿ ರಾಮಪುರಂನಲ್ಲಿ ಬಹಳ ಅದ್ಭುತವಾದ ಶ್ರೀ ರಾಮ ದೇವಸ್ಥಾನವಿತ್ತು. ಅಲ್ಲಿ ಬೆಳಗಿದ ಶ್ರೀ ಸೀತಾರಾಮಚಂದ್ರುರ ವಿಗ್ರಹಗಳು ಬಹಳ ಅದ್ಭುತ ತೇಜಸ್ಸಿನಿಂದ ಪ್ರಕಾಶಿಸುತ್ತಿತ್ತು. ಅವರ ಪಾದದ ಹತ್ತಿರ ಆಂಜನೇಯನ ವಿಗ್ರಹವೂ ನೋಡಲು ಬಹಳ ಸುಂದರವಾಗಿತ್ತು. ಪ್ರತಿಸಾರಿ ಜರುಗುವ ಶ್ರೀ ರಾಮ ನವಮಿ ಉತ್ಸವಗಳಲ್ಲಿ ದೇವರ ಮೂಲಮೂರ್ತಿಗಳನ್ನು ತುಂಬಾ ಅದ್ಭುತವಾಗಿ ಅಲಂಕರಿಸುತ್ತಿದ್ದರು. ಪ್ರತಿದಿನ ಭಜನೆ-ಹರಿಕಥೆಗಳಂತಹ ಕಾರ್ಯಕ್ರಮಗಳು ಜರುಗುತ್ತಿತ್ತು. ಸುತ್ತುಮುತ್ತಲ್ಲಿರುವ ಊರಿನಿಂದ ಅನೇಕ

ಮಂದಿ ಭಕ್ತರು ಎತ್ತಿನಗಾಡಿ ಕಟ್ಟಿಕೊಂಡು ರಾಮಪುರಂಗೆ ಬರುತ್ತಿದ್ದರು. ಆ ಹತ್ತುದಿನಗಳು ಊರೆಲ್ಲಾ ಹಬ್ಬದ ವಾತಾವರಣವನ್ನು ಪಡೆದುಕೊಳ್ಳುತ್ತಿತ್ತು. ಊರವರೆಲ್ಲರ ಮನೆಗಳು ದೂರದ ಊರಿಂದ ಬಂದ ಬಂಧುಗಳಿಂದ ತುಂಬಿತ್ತು.

ಪ್ರತಿವರುಷದ ಹಾಗೆ ಆ ಸಲ ಕೂಡ ಶ್ರೀ ರಾಮ ನವಮಿ ಉತ್ಸವಗಳು ಬಹಳ ಅದ್ಭುತವಾಗಿ ಪ್ರಾರಂಭವಾಯಿತು. ಒಂದು ದಿನ ಸಾಯಂಕಾಲ ದೇವಸ್ಥಾನದ ಆವರಣದಲ್ಲಿರುವ ಮಂಟಪದಲ್ಲಿ, ಪಕ್ಕದ ಊರಿನಿಂದ ಬಂದ ವಿಷ್ಣು ಶರ್ಮನೆಂಬ ಪಂಡಿತನು ರಾಮಾಯಣದ ಕಥೆಗಳನ್ನು ವಿವರಿಸುತ್ತಾ ಮಧ್ಯದಲ್ಲಿ ಶ್ರೀ ಆಂಜನೇಯಸ್ವಾಮಿಯ ಬಗ್ಗೆ ಹೀಗೆ ಹೇಳುತ್ತಿದ್ದನು. 'ತಮ್ಮಂದಿರೇ! ಶ್ರೀ ಆಂಜನೇಯ ಸ್ವಾಮಿಯು ಮಹಾಶಕ್ತಿಸಂಪನ್ನನು. ಮಹಾ ಧೈರ್ಯಶಾಲಿಯು. ಸಕಲ ವಿದ್ಯಾಪಾರಂಗತನು ಮತ್ತು ಆ ಸ್ವಾಮಿಯು ಸಕಲ ವಿದ್ಯಗಳಲ್ಲಿಯೂ ಸಾಟಿಯಿಲ್ಲದ ಪ್ರಾವೀಣ್ಯತೆಯನ್ನು ಹೊಂದಿದವನು. ದೊಡ್ಡ ವ್ಯಾಕರಣ ಪಂಡಿತನು. ಶತ ಯೋಜನ ಸಮುದ್ರವನ್ನು ಸುಲಲಿತವಾಗಿ ದಾಟಿದ ಮಹಾಬಲಶಾಲಿ ಹನುಮಂತನು. ಆ ಸ್ವಾಮಿಯು ಚಿರಂಜೀವಿಯಾಗಿ ಈಗಲೂ ನಮ್ಮ ಮಧ್ಯೆ ಇದ್ದಾರೆ. ಆ ಸ್ವಾಮಿಯನ್ನು ನಂಬಿ ಪೂಜಿಸುವವರಿಗೆ ಯಾವುದೇ ಆಪತ್ತುಗಳು ಹತ್ತಿರ ಸುಳಿಯದು. ಯಾವದೇ ರೀತಿಯ ಅನಾರೋಗ್ಯವಾದರೂ ಶೀಘ್ರವಾಗಿ ಬಿಟ್ಟುಹೋಗುತ್ತದೆ. ಸ್ವಾಮಿಯ ಜನ್ಮ ನಕ್ಷತ್ರವನ್ನು ಕೆಲವು ಗ್ರಂಥಗಳಲ್ಲಿ ಪೂರ್ವಭಾದ್ರ ಎಂದು, ಇನ್ನು ಕೆಲವು ಗ್ರಂಥಗಳಲ್ಲಿ ಸ್ವಾತಿ ನಕ್ಷತ್ರವೆಂದು ಹೆಳಲಾಗಿದೆ. ಆ ಸ್ವಾಮಿಗೆ ಬಾಳೆಹಣ್ಣು, ಮಾವಿನಹಣ್ಣು ತುಂಬಾ ಪ್ರಿಯವಾದದ್ದು. ಆ ಹಣ್ಣುಗಳನ್ನು ಸ್ವಾಮಿಗೆ ನಿವೇದಿಸಿದರೆ, ಸ್ವಾಮಿಯು ಬಹಳ ಸಂತೋಷಿಸುತ್ತಾನೆ. ಹನುಮಂತ ದೇವರಿಗೆ ಸಿಂಧೂರವು ಬಹಳ ಪ್ರಿಯಕರವಾದದ್ದು. ಆ ಸ್ವಾಮಿಯವರಿಗೆ ಮಂಗಳವಾರ ಮತ್ತು ಶನಿವಾರವೆಂದರೆ ತುಂಬಾ ಪ್ರಿಯವಾದದ್ದು, ಈ ದಿನಗಳಲ್ಲಿ ಹನುಮಂತ ದೇವರನ್ನು ಪೂಜಿಸಿದರೇ ಬಹಳ ಶ್ರೇಯಸ್ಕರವೆಂದು' ವಿಷ್ಣು ಶರ್ಮನು ಶ್ರೀ ಹನುಮಂತದೇವರ ವೈಭವನ್ನು ತುಂಬಾ ಸುಂದರವಾಗಿ ವಿವರಿಸಿದರು.

ವಿಷ್ಣು ಶರ್ಮನು ಮಾರುತಿಯ ವಿಶೇಷ ಮಹಿಮೆಗಳನ್ನು ಇನ್ನೂ ಹೀಗೆ ಹೇಳತೊಡಗಿದನು. "ಹನುಮಂತದೇವರಿಗೆ ತನ್ನ ಭಕ್ತರೆಂದರೆ ಹೆಚ್ಚಿನ ಅನುರಾಗ. ಅಷ್ಟೇ ಅಲ್ಲ, ತನ್ನ ಸ್ವಾಮಿ ಶ್ರೀ ರಾಮಚಂದ್ರನ ಭಕ್ತರೆಂದರೆ ಕೂಡಾ ತುಂಬಾ ಪ್ರೇಮ. ಹನುಮಂತ ದೇವರನ್ನು ನಿತ್ಯ ಸ್ಮರಿಸಿದರೆ ಯಾವರೀತಿಯ ಭಯಗಳೂ ಉಂಟಾಗುವುದಿಲ್ಲ. ಒಳ್ಳೆಯ ಆರೋಗ್ಯದಿಂದ, ಮನಸ್ಸಿನಿಂದ, ಒಳ್ಳೆಯ ಆಲೋಚನೆಗಳಿಂದ ಯಾವಾಗಲೂ ತುಂಬಾ ಉತ್ಸಾಹದಿಂದ ಇರುತ್ತಾರೆ. ಆ ಸ್ವಾಮಿಯನ್ನು ನಿತ್ಯ ಸ್ಮರಿಸುವವರಿಗೆ ಅವರು ಕೈಹಿಡಿದ ಕಾರ್ಯಗಳೆಲ್ಲದರಲ್ಲೂ ಜಯವು ಉಂಟಾಗುತ್ತದೆ. ಹನುಮಂತದೇವರ ದೇವಸ್ಥಾನವಿದ್ದ ಗ್ರಾಮಕ್ಕೆ ಯಾವುದೇ ಅರಿಷ್ಟಗಳೂ ಉಂಟಾಗುವುದಿಲ್ಲ. ಆ ಊರಿನ ಪ್ರಜೆಗಳೆಲ್ಲರೂ ಸುಖಸಂತೋಷದಿಂದ ಜೀವಿಸುತ್ತಾರೆ. ಶ್ರೀ ಆಂಜನೇಯಸ್ವಾಮಿಯವರ ದೇವಸ್ಥಾನವಿರುವ ಗ್ರಾಮದ ಗಡಿಪ್ರದೇಶಕ್ಕೂ ಕೂಡಾ ಯಾವುದೇ ದುಷ್ಟಶಕ್ತಿಗಳೂ ಪ್ರವೇಶಿಸುವುದಿಲ್ಲ. ಆ ಗ್ರಾಮದ ರೈತರ ಹೊಲಗದ್ದೆಗಳ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತವೆ. ಸಮಯಕ್ಕೆ ಮಳೆಯೂ ಸುರಿಯುತ್ತದೆ. ಅಷ್ಟೇ ಅಲ್ಲಾ, ಆ ಸ್ವಾಮಿಯ ದೇವಸ್ಥಾವಿದ್ದ ಗ್ರಾಮಕ್ಕೆ ಅಗ್ನಿಭಯವೂ ಇರುವುದಿಲ್ಲ. ಯಾವರೀತಿಯ ಅಗ್ನಿ ಪ್ರಮಾದವೂ ಜರುಗದು. ಆ ಸ್ವಾಮಿಯ ಮಹಿಮೆಯಿಂದ ಆ ಊರ ಜನತೆಯೊಟ್ಟಿಗೆ ಸುತ್ತಮುತ್ತಲ ಗ್ರಾಮದ ಪ್ರಜೆಗಳೆಲ್ಲರೂ ಕೂಡಾ ಶುಭಪ್ರದವಾಗಿ ಜೀವಿಸುತ್ತಾರೆ" ಎಂದು ಹೇಳಿದನು.

ಆಗ, ಅಲ್ಲಿದ್ದ ಭಕ್ತರಲ್ಲಿ ಒಬ್ಬರು ವಿಷ್ಣು ಶರ್ಮನನ್ನು ಹೀಗೆ ಕೇಳಿದರು. 'ಸ್ವಾಮಿ, ಹನುಮಂತರ ವೈಭವವನ್ನು ಬಹಳ ಸುಂದರವಾಗಿ ವಿವರಿಸಿದ್ದೀರಿ. ನಮ್ಮ ಊರಲ್ಲಿ ಇಲ್ಲಿಯವರೆಗೆ ಪ್ರತ್ಯೇಕವಾಗಿ ಹನುಮಂತ ದೇವರಿಗೆ ಪ್ರತ್ಯೇಕವಾದ ದೇವಾಲಯವಿಲ್ಲ. ಕೂಡಲೇ ನಾವೆಲ್ಲರೂ ಒಟ್ಟಾಗಿ ಸ್ವಾಮಿಗೆ ತಪ್ಪದೇ ಅದ್ಭುತವಾದ ದೇವಸ್ಥಾನವನ್ನು ನಿರ್ಮಿಸುತ್ತೇವೆ' ಎಂದು ಹೇಳಿದನು. ಇದನ್ನು ಕೇಳಿದ ವಿಷ್ಣು ಶರ್ಮನು ಭಕ್ತರಿಗೆ ಹೀಗೆ ಹೇಳಿದನು. 'ತಮ್ಮಂದಿರೇ! ಈ ಭಕ್ತನ ಆಲೋಚನೆ ತುಂಬಾ ದೊಡ್ಡದು. ಸಂಕಲ್ಪವು ಗಟ್ಟಿಯಾಗಿದ್ದರೆ ತಪ್ಪದೇ ಸ್ವಾಮಿಯೇ ನಮಗೆಲ್ಲಾ ಅನುಗ್ರಹಿಸುತ್ತಾನೆ. ತ್ವರಿತದಲ್ಲೇ ಇಲ್ಲಿ ನಾವು ಒಳ್ಳೆಯ ಹನುಮಂತ ದೇವರ ದೇವಸ್ಥಾನವನ್ನು ನಿರ್ಮಿಸಿಕೊಳ್ಳುತ್ತೇವೆ. ಹನುಮಂತ ಸ್ವಾಮಿಯು ಆನಂದ ಸ್ವರೂಪನು. ಆ ಸ್ವಾಮಿಯ ದರ್ಶನದಿಂದ ನಮಗೆ ಅತ್ಯಂತ ಆನಂದವು ಲಭಿಸುತ್ತದೆ. ನಮ್ಮಲ್ಲಿರುವ ಭಯ ಆತಂಕವು ಕೂಡಾ ಬಿಟ್ಟುಹೋಗುತ್ತದೆ' ಎಂದು ಹೇಳುತ್ತಿರುವಾಗ ಒಮ್ಮೆಲೇ ಆಕಾಶದಲ್ಲಿ ಮಬ್ಬು ಕತ್ತಲೆ ಆವರಿಸಿತು. ಹೀಗೆ ಒಂದೇಕ್ಷಣದಲ್ಲಿ ದಟ್ಟವಾದ ಕತ್ತಲೆ ಹೇಗೆ ಉಂಟಾಯಿತೆಂದು ಭಕ್ತರೆಲ್ಲರೂ ಆಶ್ಚರ್ಯದಿಂದ ಆಕಾಶದತ್ತ ನೋಡಿದರು. ಆಗ ಅವರಿಗೆ ಆಕಾಶದಲ್ಲಿ ಒಂದು ಅದ್ಭುತ ದೃಶ್ಯವು ಕಾಣಿಸಿತು.

ಕತ್ತಲೆಯೊಟ್ಟಿಗೆ ಬಹಳ ಶಕ್ತಿವಂತವಾದ ಮಿಂಚುಗಳು ಕೂಡಾ ಬರತೊಡಗಿತು. ಆ ಮಿಂಚುಗಳು ತುಂಬಾ ಪ್ರಕಾಶವಂತವಾಗಿ ಕಾಣಿಸುತ್ತಿದೆ. ಹೀಗಿರುವಾಗ, ಒಮ್ಮೆಲೇ ಕತ್ತಲು ತೊಲಗಿ, ಬೆಳಗಿದ ಬೆಳಕು ಹನುಮಂತ ದೇವರ ರೂಪದಲ್ಲಿ ದರ್ಶನಕೊಟ್ಟಿತು. ಆಕಾಶದಲ್ಲಿ ಅದ್ಭುತವಾಗಿ ಮಿಂಚುವ ಆ ಸ್ವಾಮಿಯ ದಿವ್ಯರೂಪದ ದರ್ಶನವು ಉಂಟಾಯಿತು. ಶ್ರೀ ಆಂಜನೇಯ ದೇವರ ದಿವ್ಯದರ್ಶನದ ಭಾಗ್ಯದಿಂದ ಭಕ್ತರೆಲ್ಲರ ತನುವು ಪುಳಕರಿಸಿತು. ಎಲ್ಲರೂ ಒಂದುಬಾರಿ ಕೈಗಳೆತ್ತಿ ನಮಸ್ಕರಿಸಿ 'ಓ ಆಂಜನೇಯಾ! ವಾಯುಪುತ್ರಾ! ಮಹಾಬಲಶಾಲಿ!' ಎಂದು ಬಹುವಿಧಗಳಿಂದ ಸ್ತುತಿಸತೊಡಗಿದರು. ಕ್ರಮವಾಗಿ ಆ ರೂಪವು ಮತ್ತಷ್ಟು ದೊಡ್ಡದಾಗಿ ಇನ್ನೂ ಪ್ರಕಾಶವಂತವಾಗಿ ತೋರತೊಡಗಿತು. ಆ ಸ್ವರೂಪದ ಸುತ್ತಲಿದ್ದ ಅದ್ಭುತವಾದ ಕಾಂತಿಯಿಂದ ಶ್ರೀ ಆಂಜನೇಯನು ಸುಂದರವಾಗಿ ದರ್ಶನವೀಯತೊಡಗಿದನು. ಆ ಸ್ವಾಮಿಯು ಕುತ್ತಿಗೆಯಲ್ಲಿ ಒಳ್ಳೆಯ ಹೂವಿನಹಾರವನ್ನು ಧರಿಸಿದ್ದಾನೆ. ಕಿವಿಗಳಿಗೆ ಅದ್ಭುತ ಕರ್ಣಾಭರಣಗಳನ್ನು ಧರಿಸಿದ್ದಾನೆ. ಕುತ್ತಿಗೆಯಲ್ಲಿ ದಿವ್ಯವಾದ ಸ್ವರ್ಣಹಾರವಿದೆ. ಎಲ್ಲದಕ್ಕೂ ಮಿಗಿಲಾಗಿ ಆ ಸ್ವಾಮಿಯು ಬಹಳ ಸುಂದರವಾದ ಕಿರುನಗೆಯಿಂದ ದರ್ಶನ ಕೊಡುತ್ತಿದ್ದಾನೆ. ಕೆಳಗಿದ್ದ ಭಕರೆಲ್ಲರೂ ಬಹಳ ಭಕ್ತಿಯಿಂದ : ಓ ಆನಂದ ಆಂಜನೇಯಾ! ಜೈ ಆನಂದ ಆಂಜನೇಯಾ! ಎಂದು ಗಟ್ಟಿಯಾಗಿ ಸ್ತುತಿಸತೊಡಗಿದರು. ಆಗ ಒಂದು ಅದ್ಭುತವು ಜರುಗಿತು. ಆಕಾಶದಲ್ಲಿದ್ದ ಸ್ವಾಮಿಯ ದಿವ್ಯರೂಪವು ನಿಧಾನ ನಿಧಾನವಾಗಿ ಆಕಾರವನ್ನು ತಗ್ಗಿಸುತ್ತಾ ಚಿಕ್ಕದಾಗುತ್ತಾ ಅತಿವೇಗವಾಗಿ ಭೂಮಿಯ ಕಡೆಗೆ ಬರತೊಡಗಿತು. ಹಾಗೆ ಬಂದು ಚಿಕ್ಕ ಶಿಲಾಪ್ರತಿಮೆಯ ರೂಪದಿಂದ ಆ ದೇವಸ್ಥಾನದ ಪ್ರಾಂಗಣದಲ್ಲಿ ನಿಂತಿರುವ ಭಂಗಿಯಲ್ಲಿ ಬಿತ್ತು. ಈ ಅದ್ಭುತ ಸಂಘಟನೆಯನ್ನು ನೋಡಿದ ಭಕ್ತರೆಲ್ಲರ ಆನಂದಕ್ಕೆ ಪಾರವೇ ಇಲ್ಲ. ಸ್ವಾಮಿಯು ಬಹಳ ದಿವ್ಯವಾಗಿ ಪ್ರಕಾಶಿಸುತ್ತಾ ಸುಂದರ ದಿವ್ಯ ಮಂದಹಾಸದಿಂದ ದರ್ಶನಕೊಡುತ್ತಿದ್ದಾರೆ. ಆ ಆಂಜನೇಯ ಪ್ರತಿಮೆಯನ್ನು ನೋಡಿ ಭಕ್ತರೆಲ್ಲರೂ ತುಂಬಾ ಪರವಶರಾದರು.

ಆಂಜನೇಯ ದೇವರು ಹೀಗೆ ಸ್ವಯಂಭುವಾಗಿ ಬೆಳಗುವುದರಿಂದ ಆ ಗ್ರಾಮದ ಪ್ರಜೆಗಳೆಲ್ಲರೂ ಬಹಳ ಸಂತೋಷಪಟ್ಟರು. ಅದೆಲ್ಲಾ ತಮ್ಮ ಪೂರ್ವಜನ್ಮದ ಪುಣ್ಯಫಲವೆಂದು ತಿಳಿದರು. ಎಲ್ಲರೂ ಕೂಡಿ ತಲೆಗೊಂದು ಕೆಲಸವನ್ನು ಹಿಡಿದು ಶ್ರೀ ಸ್ವಾಮಿಯವರಿಗೆ ಬಹಳ

ಅದ್ಭುತವಾದ ದೇವಸ್ಥಾನವನ್ನು ನಿರ್ಮಿಸಿದರು. ಆ ಸ್ವಾಮಿಯು ಶ್ರೀ ಆನಂದ ಆಂಜನೇಯನೆಂದು ಪ್ರಸಿದ್ಧನಾಗಿ ತನ್ನನ್ನು ನಂಬಿ ಪೂಜಿಸುವವರಿಗೆ ಯಾವುದೇ ಆಪತ್ತುಗಳು ಬಾರದಂತೆ ಕಾಪಾಡತೊಡಗಿದನು. ಸ್ವಲ್ಪಸಮಯಕ್ಕೆ ದೇವಸ್ಥಾನವೂ ಬಹಳ ವೃದ್ಧಿಹೊಂದಿ ಅಲ್ಲಿ ನೆಲೆಸುತ್ತಿರುವ ಶ್ರೀ ಆನಂದ ಆಂಜನೇಯಸ್ವಾಮಿಯು ಭಕ್ತರ ಕೋರಿಕೆಗಳನ್ನು ಕೊಡುವ ಕಲ್ಪವೃಕ್ಷವಾಗಿ ಪ್ರಸಿದ್ಧಿ ಹೊಂದಿದನು. ಓ ಆನಂದ ಆಂಜನೇಯಾ! ಓ ಮಹಾ ಬಲಶಾಲಿ! ಓ ಭಕ್ತವತ್ಸಲಾ! ನಿನಗಿದೇ ನಮ್ಮ ನಮಸ್ಕಾರಗಳು.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥

*********

ಐದನೇ ಅಧ್ಯಾಯ

# ಕೇಶವಪುರದ ಹನುಮಂತಸ್ವಾಮಿಯ ದಿವ್ಯಕಥೆ

ಪೂರ್ವಕಾಲದಲ್ಲಿ ಶ್ರೀಶೈಲ ಕ್ಷೇತ್ರದ ಹತ್ತಿರದಲ್ಲಿ ಕೇಶವಪುರಂ ಎಂಬ ಗ್ರಾಮವಿತ್ತು. ಆ ಗ್ರಾಮದ ಪ್ರಜೆಗಳು ಯಾವಾಗಲೂ ಸುಖಸಂತೋಷದಿಂದ ಜೀವಿಸುತ್ತಿದ್ದರು. ಎಲ್ಲರೂ ಒಟ್ಟಾಗಿ ಹೊಂದಿಕೊಂಡು ಇರುತ್ತಿದ್ದರು. ಎಲ್ಲಾ ವೃತ್ತಿಯವರಿಗೂ ಕೈ ತುಂಬಾ ಕೆಲಸವಿದ್ದು ಅವರ ಅವರ ಸಂಸಾರಗಳು  ಶುಭಪ್ರದವಾಗಿ ನಡೆಯುತ್ತಿತ್ತು. ಆ ಊರಲ್ಲಿ ಬಹಳ ಅದ್ಭುತವಾದ ಆಂಜನೇಯಸ್ವಾಮಿಯ ದೇವಸ್ಥಾನವಿತ್ತು. ಆ ಸ್ವಾಮಿಯು ತುಂಬಾ ಮಹಾಮಹಿಮಾತ್ಮನೆಂದು ಸುತ್ತುಮುತ್ತಿನ ಗ್ರಾಮಗಳಲ್ಲಿ ಪ್ರಸಿದ್ಧಿ ಹೊಂದಿದನು. ಅನೇಕ ಭಕ್ತರು ನಿತ್ಯವೂ ಆ ಸ್ವಾಮಿಯನ್ನು ದರ್ಶಿಸುತ್ತಾ ತಮ್ಮ ತಮ್ಮ ಕೋರಿಕೆಗಳನ್ನು ಈಡೇರಿಸೆಂದು ಬೇಡಿಕೊಳ್ಳುತ್ತಿದ್ದರು. ಹಾಗೆ ಬೇಡಿದ ಕೋರಿಕೆಗಳು ಅನತಿಕಾಲದಲ್ಲೇ ಈಡೇರಿದಾಗ ತಿರುಗಿ ಕುಟುಂಬ ಸಮೇತವಾಗಿ ಬಂದು ಸ್ವಾಮಿಯನ್ನು ದರ್ಶಿಸುತ್ತಿದ್ದರು. ಆ ಸ್ವಾಮಿಯನ್ನು ನಂಬಿ ಸೇವಿಸಿದರೆ ಯಾವುದೇ ಸಮಸ್ಯೆಗಳು ಕೂಡಾ ಸುಲಭವಾಗಿ ಪರಿಹಾರವಾಗುತ್ತದೆ  ಎಂದು ಭಕ್ತರು ಭಾವಿಸುತ್ತಿದ್ದರು.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದು ವರ್ಷ ತೀವ್ರವಾದ ದುರ್ಭಿಕ್ಷೆ ತಲೆದೋರಿತು. ಮಳೆ ಬರದೇ, ಸರಿಯಾಗಿ ಹೊಲಗದ್ದೆಗಳಲ್ಲಿ ಬೆಳೆ ಬೆಳೆಯಲಿಲ್ಲ. ಪ್ರಜೆಗಳೆಲ್ಲರಿಗೂ ಬಹಳ ತೊಂದರೆಯಾಗತೊಡಗಿತು. ಸಂಸಾರವನ್ನು ಸಾಗಿಸುವುದು ತುಂಬಾ ಕಷ್ಟವಾಗಿದೆ. ಹೀಗಿರುವಾಗ, ಒಂದುದಿನ ಆ ಊರಿಗೆ ಕಾಶಿಯಿಂದ ಒಬ್ಬ ಮಹಾಪಂಡಿತನು ದಕ್ಷಿಣದೇಶದ ಯಾತ್ರೆ ಮಾಡುತ್ತಾ ಬಂದನು. ಊರಿನ ಪ್ರಜೆಗಳೆಲ್ಲರೂ ಆ ಪಂಡಿತನಿಗೆ ನಮಸ್ಕರಿಸಿ ಬರಗಾಲದಿಂದ ಹೊರಬೀಳುವ ಉಪಾಯವನ್ನು ತಿಳಿಸೆಂದು ಬೇಡಿಕೊಂಡರು. ಆಗ ಆ ಪಂಡಿತನು ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಿಸಿ ಯಾವುದೋ ಅನುಭವವಾದ ಹಾಗೆ ಅವರೊಟ್ಟಿಗೆ ಹೀಗೆ ಎಂದನು. ತಮ್ಮಂದಿರೇ! ನಿಮ್ಮೆಲ್ಲರ ಕಷ್ಟಗಳನ್ನು ನಾನು ಗಮನಿಸಿದೆನು. ಒಳ್ಳೆಯ ಮಳೆ ಸುರಿದು ನೀವೆಲ್ಲರೂ ಶುಭಪ್ರದವಾಗಿ ಇರುವ ಮಾರ್ಗ ಒಂದುಂಟು. ಅದನ್ನು ಹೇಳುತ್ತೇನೆ, ಕೇಳಿ.  ನಿಮ್ಮ ಊರಲ್ಲಿರುವ ಹನುಮಂತರ ದೇವಸ್ಥಾನದಲ್ಲಿ ಬರುವ ಕಾರ್ತಿಕಮಾಸ ಹುಣ್ಣಿಮೆಯದಿನ ಪೂರ್ತಿಯಾಗುವ ಹಾಗೆ ಮೂರು ದಿನದ ಮುಂದಿನಿಂದ ಸ್ವಾಮಿಗೆ ಉತ್ಸವಗಳನ್ನು ನಿರ್ವಹಿಸಿರಿ. ಆ ಸ್ವಾಮಿಯನ್ನು ದಿನಾಲೂ ಅಷ್ಟೋತ್ತರಗಳಿಂದ

ಪೂಜಿಸಿರಿ. ಹುಣ್ಣಿಮೆಯದಿನ ಬಹಳ ವಿಜೃಂಭಣೆಯಿಂದ ಉತ್ಸವವನ್ನು ಜರುಗಿಸಿ. ಹನುಮಂತ ದೇವರು ಕರುಣಾಸಮುದ್ರನು. ತಪ್ಪದೇ ಆ ಸ್ವಾಮಿಯ ಅನುಗ್ರಹವು ನಿಮ್ಮೆಲ್ಲರ ಮೇಲೆ ಉಂಟಾಗುತ್ತದೆ, ನೀವೆಲ್ಲರೂ ಸುಖಸಂತೋಷದಿಂದ ಜೀವಿಸುತ್ತೀರಿ ಎಂದು ಹೇಳಿದನು.

ಇದನ್ನು ಕೇಳಿದ ಗ್ರಾಮದ ಪ್ರಜೆಗಳೆಲ್ಲರೂ ತುಂಬಾ ಸಂತೋಷಿಸಿ ಅವರೆಲ್ಲರೂ ತಮ್ಮೊಂದಿಗೆ ಮಾತಾಡಿಕೊಂಡು ಆ ಪಂಡಿತನೊಡನೆ ಹೀಗೆ ಹೇಳಿದರು. 'ಸ್ವಾಮಿ, ತಾವು ಮಹಾಪಂಡಿತರು. ತೇಜಸ್ಸಲ್ಲಿ ಆ ಕಾಶಿವಿಶ್ವನಾಥನ ಹಾಗೆ ಇದ್ದೀರಿ. ನಮ್ಮ ಮೇಲೆ ದಯೆದೋರಿ ನಮ್ಮ ಗ್ರಾಮದಲ್ಲೇ ಕೆಲವುಕಾಲ ಉಳಿದು ಆ ಉತ್ಸವಗಳನ್ನು ನಿಮ್ಮ ದಿವ್ಯಹಸ್ತದಿಂದ ಜರುಗಿಸಬೇಕೆಂದು ನಮ್ಮ ಪ್ರಾರ್ಥನೆ' ಎಂದು ಬೇಡಿಕೊಂಡರು. ಅದಕ್ಕೆ ಆ ಪಂಡಿತನು ಹಾಗೆ ಆಗಲೀ ಎಂದನು. ಅದರ ನಂತರ, ನಾಲ್ಕು ದಿನಗಳಿಗೆ ತ್ರಯೋದಶಿ ಬಂತು. ಆ ನಾಲ್ಕು ದಿನಗಳು, ಆ ಪಂಡಿತನು ಸ್ವಾಮಿಯ ದೇವಸ್ಥಾನದಲ್ಲೇ ಬೀಡುಬಿಟ್ಟನು. ಪ್ರತಿದಿನ ಸಾಯಂಕಾಲ ಶ್ರೀ ಹನುಮಂತರ ವೈಭವವನ್ನು ಬಹಳ ಸುಂದರವಾಗಿ ವಿವರಿಸುತ್ತಿದ್ದನು. ಆ ವಿಶೇಷಗಳನ್ನು ಕೇಳುತ್ತಾ ಭಕ್ತರೆಲ್ಲರೂ ತುಂಬಾ ಆನಂದಿಸುತ್ತಿದ್ದರು.

ತ್ರಯೋದಶಿ ದಿನ ಬೆಳಿಗ್ಗೆ ಉತ್ಸವಗಳು ಬಹಳ ಘನವಾಗಿ ಪ್ರಾರಂಭವಾದುವು. ದೇವಸ್ಥಾನವನ್ನೆಲ್ಲಾ ಬಾಳೆದಿಂಡಿನ ಕಂಬಗಳಿಂದಲೂ, ಅನೇಕ ರೀತಿಯ ಬಣ್ಣ ಬಣ್ಣದ ಹೂವುಗಳಿಂದ ಆಲಯ ಹೆಚ್ಚು ಶೋಭಾಯಮಾನವಾಗಿ ಅಲಂಕಾರಗೊಂಡು ಭಕ್ತರಲ್ಲಿ ತುಂಬಾ ಆನಂದವನ್ನುಂಟು ಮಾಡಿತು. ಊರಿನ ಪ್ರಜೆಗಳೆಲ್ಲರೂ ಮುಂಜಾನೆಯೇ ಎದ್ದು ಶುಚಿಯಾಗಿ ಸ್ನಾನವನ್ನು ಮಾಡಿ ಆಲಯಕ್ಕೆ ಬಂದರು. ದೇವಸ್ಥಾನದ ಅರ್ಚಕರೊಟ್ಟಿಗೆ ಕಾಶಿಯಿಂದ ಬಂದ ಆ ಪಂಡಿತನು ಪ್ರತ್ಯೇಕ ಪೂಜೆಗಳನ್ನು ಆರಂಭಿಸಲು ತಯಾರಾಗುತ್ತಿದ್ದರು. ಬಂದಿದ್ದ ಭಕ್ತರೆಲ್ಲರೂ ಜರುಗುವ ಪೂಜೆಗಳನ್ನು ಭಕ್ತಿ ಶ್ರದ್ಧೆಗಳಿಂದ ನೋಡಲು ಸಿದ್ಧವಾಗಿದ್ದರು. ಹೀಗಿರುವಾಗ ಒಮ್ಮೆಲೇ ಆಕಾಶದಲ್ಲಿ ದೊಡ್ಡ ಚಂಡಮಾರುತ ಎದ್ದಿತು. ಆ ಗಾಳಿಯ ತೀವ್ರತೆ ಎಷ್ಟು ಪ್ರಚಂಡವಾಗಿದೆ ಎಂದರೆ ಆ ಗಾಳಿಯ ತೀವ್ರತೆಗೆ ದೇವಸ್ಥಾನದಲ್ಲಿ ಕಟ್ಟಿದ ಬಾಳೆದಿಂಡುಗಳು ಅಲ್ಲಾಡುತ್ತಿವೆ. ಅಷ್ಟೇ ಅಲ್ಲಾ, ಇನ್ನೊಂದು ಅರ್ಧಗಂಟೆ ಸಮಯ ಈ ಗಾಳಿ ಹೀಗೇ ಇದ್ದರೆ, ಊರಿನ ಪ್ರಜೆಗಳೆಲ್ಲರ ಮನೆಯ ಹೆಂಚುಗಳು ಹಾರಿಹೋಗುವುದು ಧೃಢವಾಗಿತ್ತು. ಇಂತಹ ಬಿರುಸಿನ ವೇಗದಿಂದ ಬೀಸುವ ಗಾಳಿಯನ್ನು ಗಮನಿಸಿ ಭಕ್ತರೆಲ್ಲರೂ ತುಂಬಾ ಭಯಪಟ್ಟರು. ಏನು ಮಾಡಬೇಕೋ ಯಾರಿಗೂ ತೋಚದಾಯಿತು. ಎಲ್ಲರೂ ಸೇರಿ ಆ ಕಾಶಿಯ ಪಂಡಿತನನ್ನೇ ಬೇಡಿಕೊಂಡರು. ಆಗ ಆ ಪಂಡಿತನು ಅವರಿಗೆ ಹೀಗೇ ಹೇಳಿದನು. 'ತಮ್ಮಂದಿರೇ! ಏನೂ ಭಯಪಡಬೇಡಿ. ನಾವು ನಂಬಿದ ಹನುಮಂತ ದೇವರು ವಾಯುಪುತ್ರನೇ ಅಲ್ವಾ? ನೀವೆಲ್ಲರೂ ಆ ಸ್ವಾಮಿಯನ್ನು ಪ್ರಾರ್ಥಿಸಿರಿ. ಅಲ್ಲಿಗೆ ವಾಯುದೇವನು ಶಾಂತವಾಗುತ್ತಾನೆ' ಎಂದು ಹೇಳಿದನು.

ಇದನ್ನು ಕೇಳಿದ ಭಕ್ತರೆಲ್ಲರೂ ಆಂಜನೇಯಸ್ವಾಮಿಯನ್ನು ಪರಿಪರಿಯ ವಿಧಾನಗಳಿಂದ ಪ್ರಾರ್ಥಿಸತೊಡಗಿದರು. ಕೆಲವರು ಆ ಸ್ವಾಮಿಯ ಗುಣಲಕ್ಷಣಗಳನ್ನು ಸ್ತೋತ್ರಗಳಿಂದ ಸ್ತುತಿಸತೊಡಗಿದರು. ಇನ್ನು ಕೆಲವರು ಭಜನೆಗಳನ್ನು ಮಾಡತೊಡಗಿದರು. ಮತ್ತೂ ಕೆಲವರು ಆ ಸ್ವಾಮಿಯ ಮಹಿಮೆಗಳನ್ನು ಹಾಡುತ್ತಾ ನೃತ್ಯವನ್ನು ಮಾಡತೊಡಗಿದರು. ಸ್ವಲ್ಪ ಸಮಯದಲ್ಲೇ ಸ್ವಾಮಿಯ ಅನುಗ್ರಹದಿಂದ ಆ ಸುಂಟರಗಾಳಿ ಪೂರ್ತಿಯಾಗಿ ಕಡಿಮೆಯಾಯಿತು. ಆ ಸ್ವಾಮಿಯು ತಮ್ಮನ್ನು ಅನುಗ್ರಹಿಸಿದಕ್ಕೆ ಅವರೆಲ್ಲರೂ ಬಹಳ

ಸಂತೋಷಪಟ್ಟರು. ಆ ಸ್ವಾಮಿಯನ್ನು ಅನೇಕ ರೀತಿಯಿಂದ ಸ್ತುತಿಸಿದರು. ಆಗ ಒಂದು ಅದ್ಭುತವು ಜರುಗಿತು. ಸ್ವಾಮಿಯ ದೇವಸ್ಥಾವಿರುವ ಪ್ರದೇಶವೆಲ್ಲಾ ದಿವ್ಯವಾಗಿ ಹೊಳೆಯುತ್ತಾ ಒಂದೇಸಾರಿ ಅಲ್ಲಿ ಹನುಮಂತರ ದಿವ್ಯರೂಪವು ತಾಳೆಮರದಷ್ಟು ದೊಡ್ಡದಾಗಿ ಸಾಕ್ಷಾತ್ಕಾರವಾಯಿತು.

ಆ ಅದ್ಭುತ ದರ್ಶನಕ್ಕೆ ಭಕ್ತರೆಲ್ಲರೂ ತುಂಬಾ ಸಂತೋಷಪಟ್ಟರು. ಸ್ವಾಮಿಯು ಆ ವಿಧವಾಗಿ ಒಂದು ನಿಮಿಷದ ವರೆಗೆ ಅದ್ಭುತ ದರ್ಶನವನ್ನು ಕೊಟ್ಟು ಅದೃಶ್ಯವಾದನು. ಸ್ವಾಮಿಯ ದರ್ಶನಭಾಗ್ಯದಿಂದ ಭಕ್ತರೆಲ್ಲರಿಗೂ ಉತ್ಸಾಹವೂ ಮತ್ತಷ್ಟು ಹೆಚ್ಚಾಯಿತು. ದ್ವಿಗುಣಗೊಂಡ ಆನಂದದಿಂದ ಭಕ್ತರೆಲ್ಲರೂ ಆ ಮೂರು ದಿನಗಳಲ್ಲಿಯೂ ಹೆಚ್ಚು ಭಕ್ತಿಶ್ರದ್ಧೆಯಿಂದ ಉತ್ಸವವನ್ನು ಮಾಡಿದರು. ಊರೆಲ್ಲಾ ಹಬ್ಬದ ವಾತಾವರಣದಿಂದ ತುಂಬಿಕೊಂಡಿದೆ. ಹುಣ್ಣಿಮೆಯದಿನ ಸಾಯಂಕಾಲ ಒಳ್ಳೆಯ ಮಳೆ ಸುರಿಯಿತು. ಪ್ರಜೆಗಳೆಲ್ಲರೂ ತುಂಬಾ ಸಂತೋಷಪಟ್ಟರು. ಇಂತಹ ಒಳ್ಳೆಯ ಉತ್ಸವವನ್ನು ನಿರ್ವಹಿಸಲು ಬಹಳ ಸಹಾಯ ಮಾಡಿದ ಆ ಕಾಶಿಯ ಪಂಡಿತನನ್ನು ಅನೇಕ ರೀತಿಗಳಿಂದ ಹೊಗಳಿದರು. ಮರುದಿನ ಆ ಕಾಶಿಪಂಡಿತನು ಊರವರೆಲ್ಲರ ಅನುಮತಿ ಪಡೆದು ತನ್ನ ದೇಶಪರ್ಯಟನವನ್ನು ಮುಂದುವರೆಸಲು ತಿರುಗಿ ಹೊರಟು ಹೋದನು. ಆ ಊರಿನ ಪ್ರಜೆಗಳು ಆ ಪಂಡಿತನನ್ನು ಊರಿನ ಗಡಿವರೆಗೆ ಹೋಗಿ ಬೀಳುಕೊಟ್ಟರು. ಕಾಶಿಯಿಂದ ಬಂದ ಆ ಪಂಡಿತನನ್ನು ಶಿವಾಂಶ ಸಂಭೂತನಾದ ಶ್ರೀ ಆಂಜನೇಯನೇ ತಮ್ಮನ್ನು ಅನುಗ್ರಹಿಸಲು ಕಳಿಸಿದ್ದಾನೆಂದು ಭಾವಿಸಿದರು.

ಅನಂತರ, ಸ್ವಲ್ಪ ದಿನಗಳಲ್ಲೇ ಮಳೆಬಿದ್ದು ಹೊಲದಲ್ಲೆಲ್ಲಾ ಸಮೃದ್ಧವಾದ ಬೆಳೆ ಬೆಳೆಯಿತು. ಪ್ರಜೆಗಳೆಲ್ಲರೂ ಸುಖಸಂತೋಷಗಳಿಂದ ಅಭಿವೃದ್ಧಿ ಹೊಂದಿದರು. ಅವತ್ತಿನಿಂದ ಪ್ರತಿ ವರುಷವೂ ಕಾರ್ತಿಕಮಾಸದಲ್ಲಿ ಈ ಮೂರು ದಿನಗಳನ್ನು ಬಹಳ ಅದ್ಭುತವಾಗಿ ಆಂಜನೇಯಸ್ವಾಮಿಯವರಿಗೆ ಉತ್ಸವಗಳನ್ನು ಮಾಡುತ್ತಿದ್ದರು. ಆ ಸ್ವಾಮಿಯ ಅನುಗ್ರಹದಿಂದ ಆ ಊರಿನ ಪ್ರಜೆಗಳೆಲ್ಲರೂ ಶಾಶ್ವತವಾಗಿ ಸುಖದಿಂದ ಜೀವಿಸಿದರು. ಆ ಊರಿನ ಪ್ರಜೆಗಳಲ್ಲದೇ, ಅಕ್ಕಪಕ್ಕದ ಗ್ರಾಮದವರೂ ಕೂಡಾ ಇಲ್ಲಿ ನೆಲೆನಿಂತಿರುವ ಹನುಮಂತರನ್ನು ಸೇವಿಸುತ್ತಾ ಶಾಶ್ವತವಾಗಿ ಸುಖವಾಗಿ ಜೀವಿಸಿದರು.

ಐದನೇ ಅಧ್ಯಾಯವು ಸಂಪೂರ್ಣವಾಯಿತು

ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥

ಶ್ರೀ ಆನಂದ ಆಂಜನೇಯ ಕಥೆಗಳು ಸಂಪೂರ್ಣವಾಯಿತು.

**ಅತುಲಿತ ಬಲಧಾಮಂ ಸ್ವರ್ಣಸ್ತೆಲಾಭ ದೇಹಂ |**
**ದನುಜ ವನ ಕೃಶಾನುಂ ಜ್ಞಾನಿನಾಃಮಗ್ರಗಣ್ಯಂ |**
**ಸಕಲಗುಣ ನಿಧಾನಂ ವಾನರಾಣಾ ಮಾಧೀಶಂ |**
**ರಘುಪತಿ ಪ್ರಿಯಭಕ್ತಂ ವಾತಜಾತಂ ನಮಾಮಿ ||**

*************



ಓಂ ಆಂಜನೇಯಾಯ ವಿದ್ಮಹೇ |
ವಾಯುಪುತ್ರಾಯ ಧೀಮಹಿ |
ತನ್ನೋ ಹನುಮತ್ ಪ್ರಚೋದಯಾತ್ ||



ಮನೋಜವಂ ಮಾರುತತುಲ್ಯವೇಗಂ ಜಿತೇನ್ದ್ರಿಯಂ ಬುದ್ಧಿಮತಾಂ ವರಿಷ್ಠಂ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ ಶಿರಸಾ ನಮಾಮಿ ॥